# ನಿಮ್ಮಯ ರಕ್ಷಕರು ಈ ಆರಕ್ಷಕರು



## ತೆರೆದ ಮನೆ – ತರಬೇತಿ ಕೈಪಿಡಿ

ಕರ್ನಾಟಕ ರಾಜ್ಯ ಪೊಲೀಸ್

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಾರ್ವಜನಿಕ ಶಿಕ್ಷಣ ಇಲಾಖೆ
ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ

unicef

United Nations Children's Fund

317/A, MLA Colony, Road No. 12, Banjara Hills, Hyderabad - 500 034 INDIA
Tel: 91 40 23540712, 23540722, 23540744, 23540239, Fax: 91 40 23555156
www.unicef.org

## Foreword

'Child Protection' is about protecting children from or against any perceived or real danger or risk to their life, their personhood and childhood. It is about reducing their vulnerability to any kind of harm. It is about ensuring that no child falls out of the social security and safety net and, those who do, receive necessary care and protection.

The failure to protect children has serious consequences for their physical, mental, emotional and social development, with consequences of loss in productivity and quality of human capital. Violations of the child's right to protection are often not recognized and under-reported.

The Karnataka State Police (KSP) has over the last decade responded proactively to the growing demand for an accountable policing, for equitable access to justice, and most importantly a system protecting the rights of women and children. Police officers recognized that reforms, alongside institutionalised sensitization of police personnel and performance review, should include the critical element of building bridges to establish people's trust in the justice system, and introduced strategic innovative measures to increase accessibility of communities to police service.

'The Open House' or 'TheradaManne' in Kannada, is an innovative programme that shows great promise. It bridges the gap between the police and young people. It orients school students to roles and responsibilities of the police. It emerged as a public interface programme based on a direction by then Inspector General of Police, North Eastern Range, to the jurisdictional Police Stations, for organizing visits by school children to police stations. This direction stemmed out of a circular from the SarvaSikshanaAbhyan, Department of Education, Government of Karnataka, requesting all government departments and offices to open their doors to students. Koppal and Raichur districts and have demonstrated the potential of this approach.

UNICEF together with the Department of Women and Child Development is pleased to be part of this initiative and congratulates the Karnataka Police for their laudable work.

This manual supported by UNICEF seeks to guide future work on the 'Open House' initiative.

On behalf of UNICEF, I congratulate the field team that conceived and designed this manual.

Ruth Lascano Leaño
Chief Field Office
UNICEF Hyderabad Field Office

unite for children

unicef

# ಮುನ್ನುಡಿ

ಕರ್ನಾಟಕ ರಾಜ್ಯ ಪೊಲೀಸ್ ಭಾರತದಲ್ಲಿಯೇ ಅತ್ಯಂತ ದಕ್ಷ ಪೊಲೀಸ್ ಪಡೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇತ್ತೀಚಿನ ದಿನಗಳಲ್ಲಿ ಕಾಲ ಬದಲಾದಂತೆ ಪ್ರಕರಣಗಳ ಸ್ವರೂಪಗಳು ಬದಲಾಗುತ್ತಿವೆ. ಬದಲಾವಣೆ ಜಗದ ನಿಯಮ ಎಂಬಂತೆ ಪೊಲೀಸ್ ಇಲಾಖೆಯು ಸಹ ಅನೇಕ ನವೀನ ಬದಲಾವಣೆಗಳೊಂದಿಗೆ ಜನರೊಟ್ಟಿಗೆ ಬೆರೆತು ಕಾರ್ಯನಿರ್ವಹಿಸುತ್ತಿದೆ. ದಕ್ಷ ನ್ಯಾಯದಾನ ವ್ಯವಸ್ಥೆಯನ್ನು ಬಲಪಡಿಸಲು ಸಾರ್ವಜನಿಕರೊಂದಿಗಿನ ಉತ್ತಮ ಭಾಂದವ್ಯ ಬಹುಮುಖ್ಯ. ಪೊಲೀಸರೊಂದಿಗೆ ಸಾರ್ವಜನಿಕರು, ಸಾರ್ವಜನಿಕರೊಂದಿಗೆ ಪೊಲೀಸರು ಸಹಕರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಪೊಲೀಸ್ 'ಜನಸ್ನೇಹಿ ಪೊಲೀಸ್' ಎಂಬ ಹೆಸರನ್ನು ಪಡೆದುಕೊಂಡಿದೆ. ಇದರ ಜೊತೆಗೆ ಮಕ್ಕಳು ಮತ್ತು ಮಹಿಳೆಯರ ರಕ್ಷಣೆ ಮಾಡುವುದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತೀ ಮುಖ್ಯವಾದ ಪೊಲೀಸರ ಜವಾಬ್ದಾರಿಯಾಗಿದೆ.

ಸಾರ್ವಜನಿಕರಿಗಾಗಿಯೇ ಇರುವ ಇಲಾಖೆ ಪೊಲೀಸ್. ಪೊಲೀಸರೂ ಕೂಡಾ ಸಾರ್ವಜನಿಕರ ಒಂದು ಭಾಗವಾಗಿದ್ದಾರೆ. ಈ ಅಂಶಗಳ ಆಧಾರದಲ್ಲಿ ಪೊಲೀಸ್ ಮತ್ತು ಸಾರ್ವಜನಿಕರ ಸಂಬಂಧ ಅವಿನಾಭಾವ. ಈ ಸಂಬಂಧವನ್ನು ಗಟ್ಟಿಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಪೊಲೀಸ್ 'ಜನಸಂಪರ್ಕ(ಎಸ್.ಓ:920)' ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ 1994ರಿಂದಲೂ ನೆರವಾಗುತ್ತಿದೆ. ಇತ್ತೀಚೆಗೆ ಬೀಟ್ ಮೀಟಿಂಗ್, ಮೋಹಲ್ಲ ಮೀಟಿಂಗ್, ಶಾಂತಿ ಸಮಿತಿ ಸಭೆ, ಸಾಮುದಾಯಿಕ ಪೊಲೀಸ್, ಲಿಂಗ ಸಂವೇದನಾಶೀಲತೆ ಯೋಜನೆ, ಕೌಶಲ್ಯ ತರಬೇತಿಗಳ ಮೂಲಕ ಜನರ ಮನಸ್ಸಿನ ಹತ್ತಿರಕ್ಕೆ ಪೊಲೀಸ್ ಲಗ್ಗೆಯಿಡುತ್ತಿದ್ದಾರೆ.

ಮಕ್ಕಳು ಮತ್ತು ಮಹಿಳೆಯರಿಗಾಗಿಯೇ ಪೊಲೀಸ್ ಇಲಾಖೆಯಿಂದ ರೂಪುಗೊಂಡ ಕಾರ್ಯಕ್ರಮ 'ತೆರೆದ ಮನೆ'. ಉತ್ತರ ಕರ್ನಾಟಕದ ಗುಲ್ಬರ್ಗಾ ವಲಯದಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮವನ್ನು (ಸಂ:ಡಿಜಿಪಿ/ತರಬೇತಿ/ಎಸ್‌ಜೆಪಿಯು/15/2013 ದಿ:31/05/2013) ವಿಶಾಲ ಕರ್ನಾಟಕಕ್ಕೆ ವಿಸ್ತರಿಸಿದೆ. ಮೂಲತ: ಶಾಲಾ ಮಕ್ಕಳನ್ನು ಹಾಗೂ ಮಹಿಳೆಯರನ್ನು ಪೊಲೀಸ್ ಠಾಣೆಗೆ ಕರೆತಂದು ಪೊಲೀಸ್ ಇಲಾಖೆ ಮತ್ತು ಕರ್ತವ್ಯಗಳ ಹಾಗೂ ಅವರ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಸಂವಾದ ನಡೆಸುವುದೇ 'ತೆರೆದ ಮನೆ'. ತೆರೆದ ಮನೆ ಕೈಪಿಡಿ ಪೊಲೀಸರಿಗೊಂದು ಮಾರ್ಗದರ್ಶಿ. ಕೈಪಿಡಿಯಲ್ಲಿನ ಚಿತ್ರಗಳು ಹಾಗೂ ಮುಖ್ಯಾಂಶಗಳ ಆಧಾರದಲ್ಲಿ ಮಕ್ಕಳು ಮತ್ತು ಮಹಿಳೆಯರಿಗೆ ವಿವರವಾದ ಮಾಹಿತಿಯನ್ನು ಪೊಲೀಸರು ನೀಡಬೇಕೆಂಬುದೆ ಇದರ ಆಶಯ.

ಕೈಪಿಡಿಯು ಮೂರು ಭಾಗಗಳನ್ನೊಳಗೊಂಡಿದ್ದು, ಮೊದಲ ಭಾಗದಲ್ಲಿ 'ತೆರೆದ ಮನೆ' ಯ ಮಹತ್ವ, ಪೊಲೀಸ್ ಠಾಣೆ ಹಾಗೂ ಪೊಲೀಸರ ಕರ್ತವ್ಯಗಳ ಬಗ್ಗೆ ಹೇಳಿದೆ. ಎರಡನೇ ಭಾಗದಲ್ಲಿ ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ರಕ್ಷಣಾ ವಿಧಾನಗಳ ಬಗ್ಗೆ, ಮೂರನೇ ಭಾಗದಲ್ಲಿ ಮಕ್ಕಳು ಮತ್ತು ಮಹಿಳೆಯರೊಂದಿಗಿನ ಸಂವಾದವನ್ನು ಒಳಗೊಂಡಿದೆ. ಮೂರು ಭಾಗವನ್ನು ಪ್ರತ್ಯೇಕವಾಗಿ ಅಥವಾ ಮೊದಲು ಹಾಗೂ ಎರಡನೇ ಭಾಗವನ್ನು ಠಾಣೆಯಲ್ಲಿ, ಮೂರನೇ ಭಾಗವನ್ನು ಮಕ್ಕಳಿರುವಲ್ಲಿಗೆ ಹೋಗಿ ಸಂವಾದಿಸಬಹುದಾಗಿದೆ. ವಿವರಣೆಯ ಸಂದರ್ಭದಲ್ಲಿ ಆಯಾ ಠಾಣಾ ವ್ಯಾಪ್ತಿಯಲ್ಲಿನ ಮಕ್ಕಳ ಮತ್ತು ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ಗುರ್ತಿಸಿ ಮಾತನಾಡಬೇಕಾಗಿದೆ. ಈ ಕೈಪಿಡಿಯಲ್ಲಿನ ಮಾಹಿತಿಯನ್ನು ಅರ್ಥೈಸಿಕೊಂಡು ಮಕ್ಕಳು ಮತ್ತು ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತೀರೆಂಬ ಸದಾಶಯ ನಮ್ಮದು.

# PART 1



OPEN HOUSE
ತೆರೆದ ಮನೆ
100
100

# Slide 1: ತೆರೆದ ಮನೆಯ ಮಹತ್ವ


'ತೆರೆದ ಮನೆ' ಕಾರ್ಯಕ್ರಮವು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಪ್ರತಿ ಗುರುವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4–30 ಗಂಟೆಯವರೆಗೆ ಪೊಲೀಸ್ ಠಾಣೆಗೆ ಮಕ್ಕಳು ಮತ್ತು ಮಹಿಳೆಯರನ್ನು ಕರೆತಂದು ಅಥವಾ ಠಾಣಾ ವ್ಯಾಪ್ತಿಯ ಶಾಲೆಗಳಿಗೆ, ಸ್ತ್ರೀಶಕ್ತಿ, ಬಾಲಿಕ ಸಂಘ, ಕಿಶೋರಿಯರ ಸಂಘಗಳಿರುವಲ್ಲಿಗೆ ಪೊಲೀಸರು ಭೇಟಿ ನೀಡಿ ಸಂವಾದ ನಡೆಸುವುದರ ಮೂಲಕ ಪೊಲೀಸ್ ಹಾಗೂ ಮಕ್ಕಳು, ಮಹಿಳೆಯರ ಸಂಬಂಧವನ್ನು ಸಬಲೀಕರಣಗೊಳಿಸಿ, ಗಟ್ಟಿ ಮಾಡುವುದು.

ಮಕ್ಕಳು ಸಮುದಾಯದ ಪ್ರಜ್ಞಾವಂತ ಪ್ರಜೆಗಳಾಗಿರುವುದರಿಂದ (ಇಂದಿನ ಮಕ್ಕಳು ಇಂದಿನ ಪ್ರಜೆಗಳು) ಠಾಣಾ ವ್ಯಾಪ್ತಿಯಲ್ಲಿರುವ ಶಾಲಾ ಕಾಲೇಜುಗಳ ಮಕ್ಕಳನ್ನು ಮತ್ತು ಮಹಿಳೆಯರನ್ನು ಪೊಲೀಸ್ ಠಾಣೆಗೆ ಕರೆತಂದು ಅಥವಾ ಅವರು ಇರುವಲ್ಲಿಗೆ ತೆರಳಿ ಪೊಲೀಸ್ ವ್ಯವಸ್ಥೆ ಮತ್ತು ಸೌಲಭ್ಯಗಳ ಕುರಿತು ಅರಿವು ಮೂಡಿಸುವುದು ಮತ್ತು ಅವರ ಹಕ್ಕುಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸಿ ಅವರ ರಕ್ಷಣೆಗೆ ಸಹಕಾರಿಯಾಗುವುದೇ ಕಾರ್ಯಕ್ರಮದ ಉದ್ದೇಶ. ಇದರಿಂದ ಮಕ್ಕಳು ಮತ್ತು ಮಹಿಳೆಯರಲ್ಲಿ ಪೊಲೀಸರ ಬಗ್ಗೆ ಇರುವ ಭಯವನ್ನು ತೊಡೆದುಹಾಕಿ ಮಕ್ಕಳ ಸ್ನೇಹಿ ಮತ್ತು ಜನಸ್ನೇಹಿ ಪೊಲೀಸ್ ಕಲ್ಪನೆಯ ಬೀಜ ಬಿತ್ತಿ ಸಮುದಾಯ ಪೊಲೀಸ್ ರಕ್ಷಣಾ ವ್ಯವಸ್ಥೆಯನ್ನು ಎತ್ತಿಹಿಡಿಯುವುದಾಗಿದೆ. ಕೇವಲ ಮಾಹಿತಿ ನೀಡುವುದಲ್ಲದೆ ಕಲಿಕೆಗೆ ಅವಕಾಶ ಕಲ್ಪಿಸಿ ಅವರಿಗೆ ಸ್ವರಕ್ಷಣೆಯ ವಿಧಾನಗಳನ್ನು ತಿಳಿಸುವುದರ ಜೊತೆಗೆ ಸರ್ಕಾರ ಮತ್ತು ಇಲಾಖೆಗಳ ಸುಲಭ ಸಂಪರ್ಕ ಸಾಧಿಸಲು ನೆರವಾಗುವುದಾಗಿದೆ.


ಡಿ.ಜಿ. ಮತ್ತು ಐ.ಜಿ.ಪಿ





ಎ.ಡಿ.ಜಿ.ಪಿ





ಐ.ಜಿ.ಪಿ





ಡಿ.ಐ.ಜಿ




ಎಸ್.ಪಿ





ಹೆಚ್ಚುವರಿ ಎಸ್.ಪಿ




# Slide 2: ಪೊಲೀಸ್ ಇಲಾಖೆಯ ರಚನೆ ಮತ್ತು ಅಧಿಕಾರಿಗಳ ದರ್ಜೆ

| | |
|---|---|
| ಡಿ.ಜಿ. ಮತ್ತು ಐ.ಜಿ.ಪಿ | ಖಾಕಿ ಸಮವಸ್ತ್ರ, ಅಶೋಕ ಸ್ಥಂಭ, ದಂಡ & ಕತ್ತಿ , ಐಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಐಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ.<br>1) ಕರ್ನಾಟಕ ರಾಜ್ಯ ಪೊಲೀಸ್ ದಳದ ಆಡಳಿತ ಮತ್ತು ನಿರ್ದೇಶನವು ಡಿ.ಜಿ ಮತ್ತು ಐ.ಜಿ.ಪಿ ರವರಲ್ಲಿ ನಿಹಿತವಾಗಿದೆ, ಇವರು ರಾಜ್ಯ ಪೊಲೀಸ್ ದಳದ ಮುಖ್ಯಸ್ಥರಾಗಿರುತ್ತಾರೆ. ಕರ್ತವ್ಯಗಳ ನಿರ್ವಹಣೆಯಲ್ಲಿ ಅವರಿಗೆ ಕೇಂದ್ರ ಕಚೇರಿಯ ಅಧಿಕಾರಿಗಳಲ್ಲದೆ ಕ್ಷೇತ್ರ ಘಟಕದ ವಿಶೇಷ ಅಧಿಕಾರಿಗಳು ನೆರವಾಗುತ್ತಾರೆ.<br>2) ಡಿ.ಜಿ (ಸಿ.ಐ.ಡಿ) 3) ಡಿ.ಜಿ (ತರಬೇತಿ) 4) ಡಿ.ಜಿ (ಪೊಲೀಸ್ ಗೃಹನಿರ್ಮಾಣ ನಿಗಮ). (ಇವರ ವಾಹನದ ಮುಂದೆ 3 ನಕ್ಷತ್ರ ಇರುತ್ತದೆ) |
| ಎ.ಡಿ.ಜಿ.ಪಿ | ಖಾಕಿ ಸಮವಸ್ತ್ರ, ಒಂದು ನಕ್ಷತ್ರ, ದಂಡ & ಕತ್ತಿ , ಐಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಐಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಇವರು ಡಿ.ಜಿ & ಐಜಿ.ಪಿ, ಮತ್ತು ಡಿ.ಜಿ ರವರುಗಳ ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗುತ್ತಾರೆ, (ಇವರ ವಾಹನದ ಮುಂದೆ 3 ನಕ್ಷತ್ರ ಇರುತ್ತದೆ) |
| ಐ.ಜಿ.ಪಿ | ಖಾಕಿ ಸಮವಸ್ತ್ರ, ಅಶೋಕ ಸ್ಥಂಭ, ದಂಡ & ಕತ್ತಿ , ಐಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಐಪಿ-ಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಇವರು ಡಿ.ಜಿ & ಐಜಿ.ಪಿ, ಮತ್ತು ಡಿ.ಜಿ, ಎ.ಡಿ.ಜಿ.ಪಿ ರವರುಗಳ ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗುತ್ತಾರೆ, (ಇವರ ವಾಹನದ ಮುಂದೆ 2 ನಕ್ಷತ್ರ ಇರುತ್ತದೆ) |
| ಡಿ.ಐ.ಜಿ | ಖಾಕಿ ಸಮವಸ್ತ್ರ, ಅಶೋಕ ಸ್ಥಂಭ, ಮೂರು ನಕ್ಷತ್ರ, ಐಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಐಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಇವರು ಘಟಕಗಳ ಮುಖ್ಯಸ್ಥರಾಗಿರುತ್ತಾರೆ. ಇವರು ಡಿ.ಜಿ&ಐಜಿ.ಪಿ, ಡಿ.ಜಿ, ಎ.ಡಿ.ಜಿ.ಪಿ, ಹಾಗೂ ಐ.ಜಿ.ಪಿ ರವರುಗಳ ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗುತ್ತಾರೆ,<br>(ಇವರ ವಾಹನದ ಮುಂದೆ 1 ನಕ್ಷತ್ರ ಇರುತ್ತದೆ) |
| ಎಸ್.ಪಿ | ಖಾಕಿ ಸಮವಸ್ತ್ರ, ಅಶೋಕ ಸ್ಥಂಭ, ಒಂದು ನಕ್ಷತ್ರ, ಐಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಐಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಇವರು ಜಿಲ್ಲಾ ಪೊಲೀಸ್ ಪಡೆಯ ಮುಖ್ಯಸ್ಥರಾಗಿರುತ್ತಾರೆ. |
| ಹೆಚ್ಚುವರಿ ಎಸ್.ಪಿ | ಖಾಕಿ ಸಮವಸ್ತ್ರ, ಅಶೋಕ ಸ್ಥಂಭ, ಕೆಎಸ್‌ಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಕೆಎಸ್‌ಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಇವರು ಎಸ್.ಪಿ.ರವರ ಅಧೀನದಲ್ಲಿ ಜಿಲ್ಲೆಯ ಹೆಚ್ಚುವರಿ ಮುಖ್ಯಸ್ಥರಾಗಿರುತ್ತಾರೆ. |

ಡಿವೈಎಸ್.ಪಿ / ಎ.ಸಿ.ಪಿ





ಸಿ.ಪಿ.ಐ / ಪಿ.ಐ





ಪಿ.ಎಸ್.ಐ/ ಮ.ಪಿ.ಎಸ್.ಐ




ಎ.ಎಸ್.ಐ/ಮ.ಎ.ಎಸ್.ಐ




ಸಿ.ಹೆಚ್.ಸಿ/ಮ.ಹೆಚ್.ಸಿ




ಸಿ.ಪಿ.ಸಿ/ಮ.ಪಿ.ಸಿ



# Slide 2a: ಪೊಲೀಸ್ ಇಲಾಖೆಯ ರಚನೆ ಮತ್ತು ಅಧಿಕಾರಿಗಳ ದರ್ಜೆ

| | |
|---|---|
| ಡಿವೈಎಸ್.ಪಿ | ಖಾಕಿ ಸಮವಸ್ತ್ರ, ಕೆಎಸ್‌ಪಿಎಸ್ ಅಕ್ಷರ, ನೀಲಿ ಬಣ್ಣದ ವಿಶಲ್ ಗಾರ್ಡ್, ಪೀಕ್ ಕ್ಯಾಪಿನ ಮೇಲೆ ಕೆಎಸ್‌ಪಿಎಸ್ ಅಕ್ಷರಗಳಿರುವ ಮೋನೋಗ್ರಾಂ ಇರುತ್ತದೆ. ಭುಜದ ಮೇಲೆ 3 ನಕ್ಷತ್ರ ಇರುತ್ತದೆ. ಇವರು ಉಪವಿಭಾಗದ ಮುಖ್ಯಸ್ಥರಾಗಿರುತ್ತಾರೆ. |
| ಸಿ.ಪಿ.ಐ | ಖಾಕಿ ಸಮವಸ್ತ್ರ, 3 ನಕ್ಷತ್ರ, ನೀಲಿ ಕೆಂಪು ಬಣ್ಣದ ರಿಬ್ಬನ್, ಕೆಎಸ್‌ಪಿ ಅಕ್ಷರ, ಖಾಕಿ ವಿಶಲ್ ಗಾರ್ಡ್, ಪೊಲೀಸ್ ಮೋನೊಗ್ರಾಂ ಇರುವ ಪೀಕ್ ಕ್ಯಾಪ್, ಇವರು ಪೊಲೀಸ್ ವೃತ್ತ/ನಗರಗಳಲ್ಲಿ ಠಾಣೆಯ ಮುಖ್ಯಸ್ಥರಾಗಿರುತ್ತಾರೆ. |
| ಪಿ.ಎಸ್.ಐ/<br>ಮ.ಪಿ.ಎಸ್.ಐ | ಖಾಕಿ ಸಮವಸ್ತ್ರ, 2 ನಕ್ಷತ್ರ, ನೀಲಿ ಕೆಂಪು ಬಣ್ಣದ ರಿಬ್ಬನ್, ಕೆಎಸ್‌ಪಿ ಅಕ್ಷರ, ಖಾಕಿ ವಿಶಲ್ ಗಾರ್ಡ್, ಪೊಲೀಸ್ ಮೋನೊಗ್ರಾಂ ಇರುವ ಪೀಕ್ ಕ್ಯಾಪ್, ಇವರು ಪೊಲೀಸ್ ಠಾಣೆಯ ಮುಖ್ಯಸ್ಥರಾಗಿರುತ್ತಾರೆ. |
| ಎ.ಎಸ್.ಐ/<br>ಮ.ಎ.ಎಸ್.ಐ | ಖಾಕಿ ಸಮವಸ್ತ್ರ, ಒಂದು ನಕ್ಷತ್ರ, ನೀಲಿ ಕೆಂಪು ಬಣ್ಣದ ರಿಬ್ಬನ್, ಕೆಎಸ್‌ಪಿ ಅಕ್ಷರ, ಖಾಕಿ ವಿಶಲ್ ಗಾರ್ಡ್, ಪೊಲೀಸ್ ಮೋನೊಗ್ರಾಂ ಇರುವ ಪೀಕ್ ಕ್ಯಾಪ್, ಇವರು ಪಿಎಸ್‌ಐರವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. |
| ಸಿ.ಹೆಚ್.ಸಿ/<br>ಮ.ಹೆಚ್.ಸಿ | ಖಾಕಿ ಸಮವಸ್ತ್ರ, ಕೆಂಪು ಚವರಿ ಪಟ್ಟಿ, ಸ್ಲೌಚ್ ಹ್ಯಾಟ್, ವಿಶಲ್ ಚೈನ್, ಜಿಲ್ಲೆಯ ಬ್ಯಾಡ್ಜ್ ಮತ್ತು ಕ್ರಮ ಸಂಖ್ಯೆ ಇದ್ದು, ಇವರು ಪಿಎಸ್‌ಐರವರ ಅಧೀನದಲ್ಲಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. |
| ಸಿ.ಪಿ.ಸಿ/ಮ.ಪಿ.ಸಿ | ಖಾಕಿ ಸಮವಸ್ತ್ರ, ಸ್ಲೌಚ್ ಹ್ಯಾಟ್, ವಿಶಲ್ ಚೈನ್, ಜಿಲ್ಲೆಯ ಬ್ಯಾಡ್ಜ್ ಮತ್ತು ಕ್ರಮ ಸಂಖ್ಯೆ ಇದ್ದು, ಇವರು ಪಿಎಸ್‌ಐರವರ ಅಧೀನದಲಿ ಕರ್ತವ್ಯ ನಿರ್ವಹಿಸುತ್ತಾರೆ. |


ನಮ್ಮೂರ ಪೊಲೀಸ್ ಠಾಣೆ
KSP.GOV.IN
POLICE
ಮಹಿಳಾ ಮತ್ತು ಮಕ್ಕಳ ಹೆಲ್ಪ್ ಡೆಸ್ಕ್
ಕರ್ನಾಟಕ ರಾಜ್ಯ
ಪೊಲೀಸ್

# Slide 3: ಪೊಲೀಸ್ ಠಾಣೆಯ ಸ್ವರೂಪ ಮತ್ತು ಸಲಕರಣೆ


ನಿರ್ದಿಷ್ಠ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಠಾಣೆ ಇರುತ್ತದೆ. ಠಾಣೆಯಲ್ಲಿ ಸ್ವಾಗತ ಘಟಕ, ಪಿಎಸ್‌ಐರವರ ಕೊಠಡಿ, ಆಯುಧಗಳ ಕೊಠಡಿ, ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಬಂದೀಖಾನೆ, ಕಂಪ್ಯೂಟರ್ ಕೊಠಡಿ, ಪ್ರಕರಣ ನಡೆದ ಸ್ಥಳದಲ್ಲಿ ಮತ್ತು ಆರೋಪಿಗಳಿಂದ ವಶಪಡಿಸಿಕೊಂಡ ವಸ್ತುಗಳ ಸಂಗ್ರಹ ಕೊಠಡಿ (ಮುದ್ದೆ ಮಾಲು) ಇತ್ಯಾದಿ ಇರುತ್ತವೆ. ಠಾಣೆಯಲ್ಲಿ ಪೊಲೀಸ್ ಜೀಪ್, ಬೈಕ್, ಬಂದೂಕು, ಪಿಸ್ತೂಲ್, ಮದ್ದು ಗುಂಡುಗಳು, ವಾಕಿಟಾಕಿ, ಫೋನ್, ಕೈಕೋಳ, ಕಂಪ್ಯೂಟರ್, ಬೆರಳು ಮುದ್ರೆ ಸಲಕರಣೆಗಳು, ಕಾನೂನು ಪುಸ್ತಕ, ಪ್ರಕರಣ ಕಡತಗಳು, ಎಂಓಬಿ/ರೌಡಿ/ಕೆಡಿ ಹಾಗೂ ಇತರೇ ರಿಜಿಸ್ಟರ್‌ಗಳು ಇರುತ್ತವೆ.

ಠಾಣೆಯಲ್ಲಿ ಮಹಿಳೆ ಮತ್ತು ಮಕ್ಕಳ ಹೆಲ್ಪ್‌ಡೆಸ್ಕ್ (ಸಹಾಯ ವಿಭಾಗ) ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳೆ ಮತ್ತು ಮಕ್ಕಳ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗಿದ್ದು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿ ಹೆಲ್ಪ್ ಡೆಸ್ಕ್‌ನ ಮುಖ್ಯಸ್ಥರಾಗಿ ಹಾಗೂ ಮಹಿಳಾ ಪೊಲೀಸ್ ಅಧಿಕಾರಿ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ವಿಶೇಷ ತರಬೇತಿ ಪಡೆದಿದ್ದು, ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಯುವುದು, ಪ್ರಕರಣಗಳ ನಿರ್ವಹಣೆ, ಸಾರ್ವಜನಿಕರಿಗೆ ಕಾನೂನು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಾರೆ.


ನಮ್ಮ
ಸಮಾಜ

# Slide 4: ಪೊಲೀಸ್ ಇಲಾಖೆಯ ಕರ್ತವ್ಯಗಳು

- ಪೊಲೀಸ್ ಠಾಣೆಯ ದಿನಚರಿ ಮತ್ತು ದಸ್ತಾವೇಜುಗಳನ್ನು ನಿರ್ವಹಣೆ ಮಾಡುವುದು.
- ಸಾರ್ವಜನಿಕ ಸಂಚಾರ ನಿಯಂತ್ರಣ ಮತ್ತು ನಿಯಮಗಳನ್ನು ಜಾರಿ ಮಾಡುವುದು.
- ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು.
- ಸಾರ್ವಜನಿಕರ ರಕ್ಷಣೆ ಹಾಗೂ ಆಸ್ತಿ–ಪಾಸ್ತಿಗಳ ರಕ್ಷಣೆ.
- ಅಪರಾಧ ತಡೆಗಟ್ಟುವುದು ಮತ್ತು ಪತ್ತೆ ಹಚ್ಚುವುದು.
- ರಾತ್ರಿ ಗಸ್ತು, ಗ್ರಾಮ/ನಗರ ಗಸ್ತು, ಜಾತ್ರೆ, ಹಬ್ಬಗಳು, ಪ್ರಮುಖ ಕಾರ್ಯಕ್ರಮಗಳ ಬಂದೋಬಸ್ತ್.
- ಪ್ರಮುಖ/ಗಣ್ಯ ವ್ಯಕ್ತಿಗಳ ಭದ್ರತೆ ಮತ್ತು ಬೆಂಗಾವಲು.
- ನೈಸರ್ಗಿಕ ವಿಪತ್ತುಗಳು ಮತ್ತು ಪರಿಹಾರ ಕಾರ್ಯ ಕೈಗೊಳ್ಳುವುದು.
- ಕಾನೂನು ಬಾಹಿರ ಚಟುವಟಿಕೆ ನಡೆಸುವವರ ಮೇಲೆ ದಾಳಿ ಮಾಡಿ ಕ್ರಮ ಜರುಗಿಸುವುದು.
- ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವುದು.
- ಈ ಕರ್ತವ್ಯಗಳ ಜೊತೆಗೆ ಮಹಿಳೆ, ಮಕ್ಕಳು ಮತ್ತು ದುರ್ಬಲರಿಗೆ ರಕ್ಷಣೆ ನೀಡಿ ಅವರ ಹಕ್ಕುಗಳನ್ನು ಎತ್ತಿಹಿಡಿಯುವುದು ಪೊಲೀಸರ ಜವಾಬ್ದಾರಿ.


ಗ್ರಾಮ ಸಭೆ
ತೀರ್ಪು

# Slide 5: ನ್ಯಾಯದಾನ ವ್ಯವಸ್ಥೆ


- ನ್ಯಾಯದಾನ ವ್ಯವಸ್ಥೆಯಲ್ಲಿ ಸಮುದಾಯ, ಪೊಲೀಸ್, ಆಡಳಿತ ಮತ್ತು ನ್ಯಾಯಾಂಗ ಬಹುಮುಖ್ಯವಾದ 4 ಅಂಗಗಳಾಗಿವೆ. ಈ 4 ಅಂಗಗಳಿಗೆ ಅವರದೇ ಆದ ಪ್ರಮುಖ ಕರ್ತವ್ಯ ಮತ್ತು ಜವಾಬ್ದಾರಿಗಳಿವೆ. ಅವುಗಳನ್ನು ಸರಿಯಾಗಿ ಪ್ರತಿಯೊಂದು ಅಂಗವೂ ಸಹ ನಿರ್ವಹಿಸಿದಲ್ಲಿ ಮಾತ್ರ ಉತ್ತಮ ನ್ಯಾಯದಾನ ವ್ಯವಸ್ಥೆ ರೂಪುಗೊಳ್ಳಲು ಸಾಧ್ಯ. ಇವುಗಳಲ್ಲಿ ಜನರಿಗೆ ಬಹಳ ಹತ್ತಿರವಾದ ಮತ್ತು ಬೇಗನೇ ಸ್ಪಂದಿಸುವ ಇಲಾಖೆ ಪೊಲೀಸ್. ಕಾನೂನು ಉಲ್ಲಂಘನೆಯಾದ ಕೂಡಲೇ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಬೇಕಾಗಿರುತ್ತದೆ.
- ಸಾರ್ವಜನಿಕರು, ಸಮುದಾಯ, ಸರ್ಕಾರೇತರ ಸಂಘ–ಸಂಸ್ಥೆಗಳು, ಮಾಧ್ಯಮಗಳು ಕಾನೂನು ಉಲ್ಲಂಘನೆಯಾದಾಗ ಪೊಲೀಸರಿಗೆ ದೂರು ನೀಡುವ ಮೂಲಕ, ತನಿಖೆಗೆ ಸಂಪೂರ್ಣ ಮಾಹಿತಿ ಹಾಗೂ ಸಹಕಾರ ನೀಡಿ ನ್ಯಾಯಾಲಯದ ವಿಚಾರಣೆಯಲ್ಲಿ ಸರಿಯಾದ ಸಾಕ್ಷ್ಯ ನೀಡುವುದು ಮತ್ತು ಜನಜಾಗೃತಿಯನ್ನು ಮೂಡಿಸುವುದು ಎಲ್ಲರ ಕರ್ತವ್ಯವಾಗಿದೆ. ಅಪರಾಧ ಮಾಡುವುದರ ಜೊತೆಗೆ ಅಪರಾಧ ನಡೆದಿದ್ದರ ಬಗ್ಗೆ ಮಾಹಿತಿ ನೀಡದಿರುವುದು ಕೂಡಾ ಅಪರಾಧವಾಗಿರುತ್ತದೆ
- ಆಡಳಿತವು ಜನರಿಗೆ ಸರಿಯಾದ ಸೇವೆ ಮತ್ತು ರಕ್ಷಣೆಯನ್ನು ಒದಗಿಸಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರಿಗೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಸೇವೆಗಳನ್ನು ಜಾರಿಗೊಳಿಸುವುದರ ಜೊತೆಗೆ ಅವು ಸಾಮಾನ್ಯ ಜನರಿಗೆ ತಲುಪುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕಾಗಿದೆ.
- ಪೊಲೀಸರು ಸಾಕ್ಷಿ ಸಂಗ್ರಹ ಮಾಡಿ ತನಿಖೆ ಕೈಗೊಂಡು ಸಲ್ಲಿಸಿದ ದೋಷಾರೋಪಣಾ ಪತ್ರವನ್ನು ನ್ಯಾಯಾಲಯವು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮತ್ತು ವಿಚಾರಣೆ ಮಾಡಿ ತಪ್ಪಿತಸ್ಥರು ಕಾನೂನು ಕೈಗಳಿಂದ ತಪ್ಪಿಸಿಕೊಳ್ಳದಂತೆ ಶಿಕ್ಷೆ ನೀಡುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ.
- ಈ ಮೇಲಿನ ಎಲ್ಲರೂ ಜೊತೆಗೂಡಿ ಕಾರ್ಯ ನಿರ್ವಹಿಸಿದರೆ ಮಾತ್ರ ಉತ್ತಮವಾದ ನ್ಯಾಯದಾನ ವ್ಯವಸ್ಥೆ ರೂಪುಗೊಳ್ಳಲು ಸಾಧ್ಯ.


ಪೊಲೀಸ್ ನಿಮಗಾಗಿ
ನಾನೂ ಪೊಲೀಸ್ ಆಗ ಬೇಕು!
1091
1098
100

# Slide 6: ಮಕ್ಕಳು ಮತ್ತು ಮಹಿಳೆಯರ ಸುರಕ್ಷತೆಗಾಗಿ ಪೊಲೀಸರ ಜವಾಬ್ದಾರಿಗಳು

- ಮಕ್ಕಳು ಮತ್ತು ಮಹಿಳೆಯರ ಹೆಲ್ಪ್‌ಡೆಸ್ಕ್ (ಸಹಾಯ ಘಡಕ)
- ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲು ಮಕ್ಕಳ ಕಲ್ಯಾಣಾಧಿಕಾರಿಗಳಿದ್ದು, ವಿಶೇಷ ತರಬೇತಿಯೊಂದಿಗೆ ಮಕ್ಕಳ ನ್ಯಾಯ ಕಾಯ್ದೆಯಂತೆ ಪ್ರಕರಣಗಳನ್ನು ನಿರ್ವಹಿಸುವುದು.
- ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸಿ ಸೂಕ್ತ ತನಿಖೆ ಕೈಗೊಂಡು ನ್ಯಾಯ ದೊರಕಿಸುವುದು.
- ಮಕ್ಕಳು ಮತ್ತು ಮಹಿಳೆಯರೊಂದಿಗೆ ಸಂವೇದನಾಶೀಲರಾಗಿ ಸೌಜನ್ಯ ಹಾಗೂ ಸ್ನೇಹದಿಂದ ವರ್ತಿಸುವುದು.
- ಸಂಜೆ 6 ರಿಂದ ಬೆಳಿಗ್ಗೆ 6 ರವರೆಗೆ ಠಾಣೆಯಲ್ಲಿ ಇರಿಸಿಕೊಳ್ಳದಿರುವುದು
- ಮೂಲಭೂತ ಅವಶ್ಯಗಳಾದ ಆಸನ, ಕುಡಿಯುವ ನೀರು, ಆಹಾರ, ಶೌಚಾಲಯ, ವೈದ್ಯಕೀಯ ಚಿಕಿತ್ಸೆ, ಫೋನ್ ಕಾಲ್, ಬಂಧುಗಳು ಸ್ನೇಹಿತರ ಭೇಟಿಗೆ ಅವಕಾಶ ಕಲ್ಪಿಸುವುದು.
- ತೆರೆದಮನೆ, ಜನಸಂಪರ್ಕ ಸಭೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಮಕ್ಕಳಿಗೆ ಸಂಬಂಧಿಸಿದ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕ, ಕಾಣೆಯಾದ ಮಕ್ಕಳ ಬ್ಯೂರೋ, ಮಕ್ಕಳ ಸಹಾಯವಾಣಿ (1098) ಸಾಂತ್ವನ/ಸ್ವಾಧಾರ ಮಹಿಳಾ ಸಹಾಯವಾಣಿ ಕೇಂದ್ರ (1091) ಉಚಿತ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ, ಆಪ್ತ ಸಮಾಲೋಚನಾ ಕೇಂದ್ರಗಳ ಮೂಲಕ ಸಹಾಯ ಪಡೆಯಲು ಮಾಹಿತಿ ಒದಗಿಸುವುದು.

# PART 2


ಮಕ್ಕಳ ಹಕ್ಕುಗಳು
1 ಜೀವಿಸುವ ಹಕ್ಕು
ರಕ್ಷಣೆಯ ಹಕ್ಕು 2
ಸಂಪೂರ್ಣ ವಿಕಾಸ ಹೊಂದುವ ಹಕ್ಕು 3
4 ಭಾಗವಹಿಸುವ ಹಕ್ಕು

# Slide 1: ಮಕ್ಕಳ ಹಕ್ಕುಗಳು

- ಭಾರತ ಸರ್ಕಾರವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲವೊಂದು ಮಹತ್ವದ ಒಡಂಬಡಿಕೆ/ಒಪ್ಪಂದಗಳಿಗೆ ಸಹಿ ಮಾಡಿದ್ದು, ಅವುಗಳನ್ನು ಸರ್ಕಾರ ಜಾರಿಗೊಳಿಸಬೇಕಾಗಿದೆ. ಇವುಗಳಲ್ಲಿ 'ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ' (1948) ಯನ್ನು ಒಪ್ಪಿಕೊಂಡಿದೆ. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ 'ಮಹಿಳೆಯರ ಮೇಲಿನ ಎಲ್ಲ ರೀತಿಯ ತಾರತಮ್ಯವನ್ನು ತೊಡೆದು ಹಾಕುವ ಒಡಂಬಡಿಕೆ'ಗೆ (1989) ಸಹಿ ಮಾಡಿದೆ. ಅದರಂತೆ ಮಕ್ಕಳಿಗೆ ಸಂಬಂಧಿಸಿದಂತೆ 'ಅಂತಾರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ'ಗೆ (1992 ಡಿಸೆಂಬರ್ 11) ಸಹಿ ಮಾಡಿದೆ.
- ಮೇಲಿನ ಒಪ್ಪಂದಗಳಂತೆ ಯಾವುದೇ ವ್ಯಕ್ತಿಗೆ ವಿಶೇಷವಾಗಿ ಮಕ್ಕಳ ಮತ್ತು ಮಹಿಳೆಯರಿಗೆ ತಾರತಮ್ಯ, ಹಿಂಸೆ, ಶೋಷಣೆ, ಲೈಂಗಿಕ ಕಿರುಕುಳದಿಂದ ಸೂಕ್ತ ರಕ್ಷಣೆ ನೀಡಿ ಅವರ ಹಕ್ಕುಗಳನ್ನು ರಕ್ಷಿಸುವುದಾಗಿದೆ.
- ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಒಟ್ಟು 54 ಪರಿಚ್ಛೇದಗಳಿದ್ದು, ಮಗು ಅಥವಾ ಮಕ್ಕಳು ಎಂದರೆ 18 ವರ್ಷದ ಒಳಗಿನ ಎಲ್ಲ ಮನುಷ್ಯ ಜೀವಿಗಳು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಅವುಗಳನ್ನು 4 ಹಕ್ಕುಗಳ ಗುಂಪುಗಳಲ್ಲಿ ವಿವರಿಸಿದೆ.

➢ ಬದುಕುವ ಹಕ್ಕು:– ಪ್ರತಿಯೊಂದು ಭ್ರೂಣವು ಸುರಕ್ಷಿತವಾಗಿ ಜನಿಸಬೇಕು. ಅದಕ್ಕೆ ಸಂಬಂಧಿಸಿದ ವ್ಯವಸ್ಥೆಗಳನ್ನು ಸರ್ಕಾರ ಒದಗಿಸಿಕೊಡಬೇಕು.

➢ ರಕ್ಷಣೆಯ ಹಕ್ಕು:–18 ವರ್ಷದೊಳಗಿನ ಮಕ್ಕಳಿಗೆ ಕುಟುಂಬ, ಸಮುದಾಯ, ಸರ್ಕಾರ ಹಾಗೂ ಕಾನೂನಿನಿಂದ ಎಲ್ಲ ರೀತಿಯ ರಕ್ಷಣೆ ಒದಗಿಸಬೇಕು.


➢ ಅಭಿವೃದ್ಧಿ ಮತ್ತು ವಿಕಾಸ ಹೊಂದುವ ಹಕ್ಕು:– ಯಾವುದೇ ಲಿಂಗ, ಜಾತಿ, ಧರ್ಮ ಹಾಗೂ ಇತರೇ ವಿಷಯಗಳ ಮೇಲೆ ಮಕ್ಕಳಿಗೆ ತಾರತಮ್ಮ ಮಾಡದೇ ಅವರ ಸರ್ವತೋಮುಖ ವಿಕಾಸ ಹಾಗೂ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು.

➢ ಭಾಗವಹಿಸುವ ಹಕ್ಕು:– ಮಕ್ಕಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿ ಮಕ್ಕಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವಾಗ ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು.


सत्यमेव जयते
ಭಾರತ ಸರ್ಕಾರ
ಮಕ್ಕಳ ಹಕ್ಕು
ಶಾಲೆ
18 ವರ್ಷದೊಳಗಿನವರೆಲ್ಲ ಮಕ್ಕಳು
ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಹಾನಿ
1098
ಮಕ್ಕಳ ಸಹಾಯವಾಣಿ


# Slide 2: ಚಿಂದಿ ಆಯುವ ಮಕ್ಕಳು ಹಾಗೂ ಭಿಕ್ಷೆ ಬೇಡುವ ಮಕ್ಕಳು

- ಮೇಲಿನ ಚಿತ್ರಗಳಲ್ಲಿ ತೋರಿಸಿದ ಘಟನೆಗಳಿಂದ ಮಕ್ಕಳ ಮೂಲಭೂತ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ.
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ–2009 ರ ಪ್ರಕಾರ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಜಾರಿಯಾಗಿದ್ದು, ಪ್ರತಿಯೊಂದು ಮಗುವು ಶಾಲೆಯಲ್ಲಿ ಕಡ್ಡಾಯವಾಗಿ ಶಿಕ್ಷಣ ಪಡೆಯಲೇಬೇಕು.
- ಮಕ್ಕಳ ಹಕ್ಕುಗಳ ಒಡಂಬಡಿಕೆ – 1989ರ ಪ್ರಕಾರ 18 ವರ್ಷದ ಒಳಗಿನವರೆಲ್ಲರೂ ಮಕ್ಕಳು.
- ಚಿಂದಿ ಆಯುವುದು ಮತ್ತು ಭಿಕ್ಷೆ ಬೇಡುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.
- ಇವರ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಹಾಗೂ ಇನ್ನಿತರೇ ಶೋಷಣೆಗಳು ಹೆಚ್ಚಾಗಿರುತ್ತದೆ.
- ಇವರನ್ನು ಕಾನೂನುಬಾಹಿರ ಚಟುವಟಿಕೆಗಳಿಗೆ ಉಪಯೋಗಿಸುತ್ತಾರೆ.
- ಇಂತಹ ಮಕ್ಕಳು ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ (1098), ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಪೊಲೀಸ್ ಠಾಣೆ ಇವರಿಗೆ ಮಾಹಿತಿ ನೀಡಿ ರಕ್ಷಿಸುವುದು.


ಪೊಲೀಸ್ ಠಾಣೆ
ಮೇ
25
₹100
1098
100
ಎಫ್ಐಆರ್

# Slide 3: ಕಾಣೆಯಾದ ಮತ್ತು ಸಾಗಾಣಿಕೆಗೊಳಪಟ್ಟ ಮಕ್ಕಳು


- ಮಕ್ಕಳು ಕಾಣೆಯಾದರೆ ಅಥವಾ ತಪ್ಪಿಸಿಕೊಂಡರೆ ಕೂಡಲೇ ಪೊಲೀಸ್ ಠಾಣೆಯಲ್ಲಿ ದೂರು (ಎಫ್ಐಆರ್) ದಾಖಲಿಸುವುದು. ಕಾಣೆಯಾದ ಮಕ್ಕಳ ಬ್ಯೂರೋಗೆ ಮಾಹಿತಿ ನೀಡುವುದು ಹಾಗೂ ದೂರು ನೀಡಿದ ಬಗ್ಗೆ ಸ್ವೀಕೃತಿ ಪಡೆಯುವುದು.
- ಕಾಣೆಯಾದ ಮಕ್ಕಳನ್ನು ಸಾಗಾಣಿಕೆ ಮಾಡಿ ವೇಶ್ಯಾವಾಟಿಕೆ, ಭಿಕ್ಷೆ, ಕೆಲಸ, ಜೀತ, ಉಗ್ರಗಾಮಿ ಚಟುವಟಿಕೆ, ಮಾಧಕ ವಸ್ತುಗಳ ಸಾಗಣಿ, ಅಂಗಾಂಗ ಮಾರಾಟ, ನರಬಲಿ ಇತ್ಯಾದಿಗಳಿಗೆ ಬಳಸಿಕೊಳ್ಳುವ ಸಾಧ್ಯತೆಗಳೇ ಹೆಚ್ಚು.
- ಸಾಗಾಣಿಕೆಗೊಳಪಟ್ಟ ಮಕ್ಕಳ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಹಾಗೂ ಇನ್ನಿತರ ಶೋಷಣೆಗಳ ಸಂಭವ ಜಾಸ್ತಿ .
- ಪಾಲಕರು, ಸಂಬಂಧಿಕರು, ನೆರೆಹೊರೆಯವರು, ಸ್ನೇಹಿತರು, ಶಾಲೆ, ಪಂಚಾಯಿತಿ, ಸಾರ್ವಜನಿಕರು ಕೂಡಲೇ ಮಾಹಿತಿ ನೀಡಬೇಕು.
- ಇಂತಹ ಮಕ್ಕಳು ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ 1098 ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಪೊಲೀಸ್ ಠಾಣೆ ಇವರಿಗೆ ಮಾಹಿತಿ ನೀಡಿ ರಕ್ಷಿಸುವುದು.
- ವಾಸಿಸುವ ಸ್ಥಳದ ಸುತ್ತಮುತ್ತ, ಶಾಲೆ ಸುತ್ತಮುತ್ತ ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದರೆ ಕೂಡಲೇ ಮಾಹಿತಿ ನೀಡುವುದು. ಇಂತವರು ನೀಡುವ ಯಾವುದೇ ವಸ್ತುಗಳನ್ನು ಸ್ವೀಕರಿಸಬಾರದು.



18 ವರ್ಷ
21 ವರ್ಷ
ಇದಕ್ಕಿಂತ ಕಡಿಮೆ
ವಯಸ್ಸಿನವರ ಮದುವೆ
ಬಾಲ್ಯವಿವಾಹ
ಶಿಕ್ಷೆ
2 ವರ್ಷ ಜೈಲು
1 ಲಕ್ಷ ರೂ ದಂಡ
500

# Slide 4: ಬಾಲ್ಯವಿವಾಹ

- ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಪ್ರಕಾರ 18 ವರ್ಷದೊಳಗಿನ ಹೆಣ್ಣು, 21 ವರ್ಷದೊಳಗಿನ ಗಂಡಿಗೆ ವಿವಾಹ ಮಾಡಿದರೆ ಅದು ಬಾಲ್ಯವಿವಾಹವಾಗುತ್ತದೆ.
- ಬಾಲ್ಯ ವಿವಾಹ ಮಾಡಿದರೆ ಬಾಲ್ಯವಿವಾಹ ಮಾಡಿಕೊಳ್ಳುವ ವಯಸ್ಕರು, ತಂದೆ ತಾಯಿ, ಪೋಷಕರು, ಸಾಮೂಹಿಕ ವಿವಾಹ ಸಂಘಟಕರು, ಪೂಜಾರಿ, ಭಾಗವಹಿಸುವವರು, ಸಹಕಾರ ನೀಡುವವರು ಆರೋಪಿಗಳಾಗಿದ್ದು ಇವರು ಎರಡು ವರ್ಷ ಜೈಲು ಶಿಕ್ಷೆ ಹಾಗೂ ಒಂದು ಲಕ್ಷ ದಂಡಕ್ಕೆ ಗುರಿಯಾಗುತ್ತಾರೆ.
- ಬಾಲ್ಯವಿವಾಹ ತಡೆಗಟ್ಟುವುದು ಎಲ್ಲರ ಜವಾಬ್ದಾರಿಯಾಗಿದ್ದು, ನಮ್ಮ ಸುತ್ತಮುತ್ತ ಬಾಲ್ಯವಿವಾಹ ಕಂಡುಬಂದರೆ ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ ದೂರು ನೀಡುವುದು.
- ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ಶಾಲಾ ಮುಖ್ಯೋಪಾಧ್ಯಾಯರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಂದಾಯ ನಿರೀಕ್ಷಕರು, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಸಿಡಿಪಿಓ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಾಗಿರುತ್ತಾರೆ.



# ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳು

## ಆರೋಗ್ಯ



## ಮಾನಸಿಕ



## ಕೌಟುಂಬಿಕ



# Slide 4a: ಬಾಲ್ಯವಿವಾಹ

- ಬಾಲ್ಯವಿವಾಹಕ್ಕೊಳಪಟ್ಟ ಮಕ್ಕಳ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಹಾಗೂ ಇನ್ನಿತರೇ ಶೋಷಣೆಗಳು ನಡೆಯುತ್ತವೆ. ಇವರು ಕುಟುಂಬ ನಡೆಸಲು ಸಿಧ್ದರಾಗಿರುವುದಿಲ್ಲ. ಮಕ್ಕಳನ್ನು ಹೆರಲು ದೈಹಿಕವಾಗಿ ಶಕ್ತರಾಗಿರುವುದಿಲ್ಲ.
- ಬಾಲ್ಯವಿವಾಹದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿ ಶಿಶು ಮರಣ, ತಾಯಿ ಮರಣಗಳು ಹೆಚ್ಚಾಗುತ್ತವೆ.


XXX
A
100

# Slide 5: ಲೈಂಗಿಕ ದೌರ್ಜನ್ಯ

- ಮಕ್ಕಳ ಲೈಂಗಿಕ ಹಲ್ಲೆ ಎಂದರೆ ಅತ್ಯಾಚಾರ, ಮಾನಭಂಗ, ಅಶ್ಲೀಲ ಪದಗಳ ಬಳಕೆ, ಅಂಗಾಂಗಗಳನ್ನು ಮುಟ್ಟುವುದು, ಹಿಂಬಾಲಿಸುವುದು, ಚುಡಾಯಿಸುವುದು, ಮಕ್ಕಳ ಖಾಸಗೀತನವನ್ನು ಕದ್ದು ನೋಡುವುದು ಮತ್ತು ಫೋಟೋ ವೀಡಿಯೋ ತೆಗೆಯುವುದು, ಅಶ್ಲೀಲ ಸಂದೇಶ ಮತ್ತು ಚಿತ್ರಗಳನ್ನು ತೋರಿಸುವುದು, ನೀಲಿ ಚಿತ್ರಗಳನ್ನು ತೋರಿಸುವುದು ಮತ್ತು ತಯಾರಿಸಲು ಮಕ್ಕಳನ್ನು ಬಳಸುವುದು ಲೈಂಗಿಕ ಹಲ್ಲೆಯಾಗುತ್ತದೆ. ಇದು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012 ರಪ್ರಕಾರ ಅಪರಾಧವಾಗುತ್ತದೆ.
- ಈ ರೀತಿ ನಿಮ್ಮ ಮೇಲೆ ಹಲ್ಲೆಗಳಾದರೆ ಪೋಷಕರು, ಶಿಕ್ಷಕರು, ಪೊಲೀಸರಿಗೆ ಮಾಹಿತಿ ನೀಡುವುದು.


100
ಹೋಟೆಲ್ ಅಭಿರುಚಿ
1098


# Slide 6: ಬಾಲಕಾರ್ಮಿಕ ಮತ್ತು ಪರಿತ್ಯಕ್ತ (ತ್ಯಜಿಸಲ್ಪಟ್ಟ) ಮಕ್ಕಳು

- ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986 ರ ಪ್ರಕಾರ 14 ವರ್ಷದೊಳಗಿನ ಮಕ್ಕಳು ಕೆಲಸ ಮಾಡಿದರೆ ಅದು ಬಾಲಕಾರ್ಮಿಕತೆಯಾಗುತ್ತದೆ.
- ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡ ಮಾಲೀಕರಿಗೆ 1 ವರ್ಷ ಜೈಲುವಾಸ ಮತ್ತು 20 ಸಾವಿರ ದಂಡಕ್ಕೆ ಗುರಿಯಾಗುತ್ತಾರೆ.
- ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ– 1976–ಪ್ರಕಾರ ಜೀತವೆಂದರೆ ಪೂರ್ವಜರ ಸಾಲ, ಮುಂಗಡ ಹಣ, ಕನಿಷ್ಠ ಕೂಲಿಗಿಂತ ಕಡಿಮೆ ಹಣ ನೀಡಿ ದುಡಿಸಿಕೊಳ್ಳುವುದು ಅಪರಾಧ. ಹಾಗೂ ಅವರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಾಗಿದೆ.
- ಬಾಲಕಾರ್ಮಿಕ ಪದ್ಧತಿ ನಿಷೇಧ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಂದಾಯ ನಿರೀಕ್ಷಕರು, ಪೊಲೀಸ್ ಸಬ್ಇನ್ಸ್‌ಪೆಕ್ಟರ್, ಸಿಡಿಪಿಓ, ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಾಗಿರುತ್ತಾರೆ. ಇವರಿಗೆ ಮಾಹಿತಿ ಹಾಗೂ ದೂರು ನೀಡಬೇಕು.
- ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಹಾಗೂ ಇನ್ನಿತರೇ ಶೋಷಣೆಗಳು ನಡೆದು, ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗಿ ವಿವಿಧ ರೀತಿಯ ರೋಗಕ್ಕೆ ತುತ್ತಾಗುತ್ತಾರೆ.
- ಪರಿತ್ಯಕ್ತ (ತ್ಯಜಿಸಲ್ಪಟ್ಟ) ಮಕ್ಕಳೆಂದರೆ, ಪಾಲಕರು ಬಿಟ್ಟುಹೋದ ನವಜಾತ ಶಿಶು, ನಿರ್ಲಕ್ಷಿತ ಮಕ್ಕಳಾಗಿರುತ್ತಾರೆ. ಇಂತಹ ಮಕ್ಕಳು ಕಂಡುಬಂದರೆ ಇವರನ್ನು ರಕ್ಷಿಸಲು ಮಕ್ಕಳ ಸಹಾಯವಾಣಿ 1098 ಮಕ್ಕಳ ಕಲ್ಯಾಣ ಸಮಿತಿ (ಮಕ್ಕಳ ಕಲ್ಯಾಣ ಸಮಿತಿ ಪ್ರತಿ ಜಿಲ್ಲೆಗೊಂದರಂತೆ ರಚಿಸಲಾಗಿದೆ) ಹಾಗೂ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು.


ಪಾಠ 3

# Slide 7: ಶಾಲೆಯಲ್ಲಿ ಮಕ್ಕಳ ಮೇಲೆ ದೈಹಿಕ ಹಲ್ಲೆ

- ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ಶಾಲಾ ಸಿಬ್ಬಂದಿ ಮಕ್ಕಳ ಮೇಲೆ ದೈಹಿಕ ಮತ್ತು ಮಾನಸಿಕ ಹಲ್ಲೆ ಮಾಡುವಂತಿಲ್ಲ. ಹಾಗೆ ಮಾಡಿದರೆ ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ – 2000 ಪ್ರಕಾರ ಅಪರಾಧವಾಗುತ್ತದೆ.
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ–2009 ರ ಕಲಂ 17(1) ಯಾವುದೇ ಮಗುವನ್ನು 'ದೈಹಿಕ ಶಿಕ್ಷೆ' ಅಥವಾ 'ಮಾನಸಿಕ ಕ್ಷೋಭೆಗೆ' ಗುರಿಮಾಡುವಂತಿಲ್ಲ.


ನಗರದಲ್ಲಿ ಉದ್ಯೋಗ
ಸುವರ್ಣಾವಕಾಶ,
ಹೆಣ್ಣು ಮಕ್ಕಳಿಗೆ ಬನ್ನಿ ಬನ್ನಿ
500


## Slide 8: ಮಕ್ಕಳ ಹಾಗು ಮಹಿಳೆಯರ ಸಾಗಾಣಿಕೆ ಮತ್ತು ಮಾರಾಟ

- ಸಾಗಾಣಿಕೆ ಎಂದರೆ, ಒಬ್ಬ ವ್ಯಕ್ತಿಯನ್ನು ಹೆದರಿಸಿ, ಬಲವಂತವಾಗಿ, ಅಪಹರಣದಿಂದ, ಮೋಸದಿಂದ, ಅಧಿಕಾರದ ದುರುಪಯೋಗದಿಂದ ಅವರ ಒಪ್ಪಿಗೆ ಪಡೆದು ಅಥವಾ ಪಡೆಯದೆಯೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು, ನೇಮಿಸಿಕೊಳ್ಳುವುದು, ಮಾರುವುದು, ಕೊಳ್ಳುವುದು, ಸ್ಥಳಾಂತರಿಸುವುದಾಗಿದೆ.
- ಸಾಗಾಣಿಕೆ ಮಾಡಿದ ವ್ಯಕ್ತಿಗಳನ್ನು ಮಾರಾಟ ಮಾಡಿ ವೇಶ್ಯಾವಾಟಿಕೆ, ಭಿಕ್ಷೆ, ಕೆಲಸ, ಜೀತ, ಉಗ್ರಗಾಮಿ ಚಟುವಟಿಕೆ, ಮಾಧಕ ವಸ್ತುಗಳ ಸಾಗಣಿ, ಅಂಗಾಂಗ ಮಾರಾಟ, ನರಬಲಿ ಇತ್ಯಾದಿಗಳಿಗೆ ಬಳಸಿಕೊಳ್ಳುತ್ತಾರೆ.
- ಇವರ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಹಾಗೂ ಇನ್ನಿತರೇ ಶೋಷಣೆಗಳನ್ನು ನಡೆಸುತ್ತಾರೆ.
- ಮಕ್ಕಳು ಮತ್ತು ಮಹಿಳೆಯರನ್ನು ವೇಶ್ಯಾವಾಟಿಕೆಗಾಗಿ ಮಾರಾಟ ಅಥವ ಸಾಗಾಣಿಕೆ ಮಾಡಿ ದುಡಿಮೆ, ಲೈಂಗೀಕ ದೌರ್ಜನ್ಯ, ಅಶ್ಲೀಲ ಛಾಯ ಚಿತ್ರ ತೆಗೆಯುವುದು, ಅಶ್ಲೀಲ ಚಿತ್ರಕ್ಕೆ ಬಳಕೆ ಹೀಗೆ ವಿವಿಧ ರೀತಿಯಲ್ಲಿ ಅಮಾನವಿಯವಾಗಿ ಹಿಂಸಿಸುತ್ತಾರೆ.
- ವ್ಯಕ್ತಿಗಳನ್ನು ಸಾಗಾಣಿಕೆ, ಮಾರಾಟ ಮಾಡುವುದು ಮತ್ತು ಕೊಂಡು ಕೊಳ್ಳುವುದು, ಬಲವಂತವಾಗಿ ದುಡಿಸುವುದು, ವೇಶ್ಯಾವಾಟಿಕೆಗೆ ತೊಡಗಿಸುವುದು ಐಪಿಸಿ ಕಲಂ 370, 371, 372, 373, 374 ರ ಪ್ರಕಾರ ಹಾಗೂ ಅನೈತಿಕ ಸಾಗಾಣಿಕೆ ತಡೆ ಕಾಯ್ದೆ–1986 ರ ಪ್ರಕಾರ ಅಪರಾಧವಾಗುತ್ತದೆ.


500

# Slide 9: ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯಗಳು

- ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ–2005 ಹಾಗೂ ನಿಯಮ 2006 ರ ಪ್ರಕಾರ  ಕೌಟುಂಬಿಕ ದೌರ್ಜನ್ಯ ಎಂದರೆ, ದೈಹಿಕ ಹಿಂಸೆ, ಮಾನಸಿಕ ಹಿಂಸೆ, ಶಾಬ್ದಿಕ/ಅಶಾಬ್ದಿಕ ಹಿಂಸೆ, ಲೈಂಗಿಕ ಹಿಂಸೆ, ಭಾವನಾತ್ಮಕ ಹಿಂಸೆ, ಆರ್ಥಿಕ ಹಿಂಸೆ, ವರದಕ್ಷಿಣೆ ಕಿರುಕುಳ ಹಾಗೂ ಇತರೇ ಹಿಂಸೆಗಳನ್ನು ಒಳಗೊಂಡಿದೆ.
- ನೊಂದ ಮಹಿಳೆ ಎಂದರೆ ವಿವಾಹದಿಂದಾದ ಸಂಬಂಧ, ರಕ್ತ ಸಂಬಂಧದಿಂದಾದ ಸಂಬಂಧ, 18 ವರ್ಷದೊಳಗಿನ ಯಾವುದೇ ಮಗು, ದತ್ತಕ ಮಗು, ಹಾಗೂ ಸಹಜೀವನ ಅಥವಾ ಗಂಡ ಹೆಂಡತಿಯಂತೆ ಒಟ್ಟಿಗೆ ವಾಸಿಸುವವರು ದೂರು ನೀಡಬಹುದಾಗಿದೆ.
- ನ್ಯಾಯಾಲಯ, ರಕ್ಷಣಾಧಿಕಾರಿ ಅಥವಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಓ), ಸರ್ಕಾರದಿಂದ ನೊಂದಾಯಿಸಲ್ಪಟ್ಟ ಸ್ವಯಂಸೇವಾ ಸಂಸ್ಥೆಗಳಲ್ಲಿ ದೂರನ್ನು ದಾಖಲಿಸಬಹುದಾಗಿದೆ.
- ಈ ಕಾಯ್ದೆಯಡಿ ಮಹಿಳೆಯು ರಕ್ಷಣಾ ಆದೇಶ, ವಾಸಸ್ಥಳದ ಆದೇಶ, ಮಕ್ಕಳ ಸುಪರ್ದಿ ಆದೇಶ, ತಾತ್ಕಾಲಿಕ ಹಣಕಾಸಿನ ನೆರವು, ಆರ್ಥಿಕ ಪರಿಹಾರ ಮತ್ತು ತಾತ್ಕಾಲಿಕ ಪುನರ್ವಸತಿ ಪಡೆಯಬಹುದಾಗಿದೆ



500
ವರದಕ್ಷಿಣೆ ಪಡೆಯುವುದಾಗಲಿ ಕೊಡುವುದಾಗಲಿ ಶಿಕ್ಷಾರ್ಹ ಅಪರಾಧ
5 ವರ್ಷ ಜೈಲು
ರೂ. 15,000/- ದಂಡ
500
ವರದಕ್ಷಿಣೆಗೆ ಸಂಬಂಧಿಸಿದಂತೆ ಮಹಿಳೆಯ ಸಾವಾದರೆ 7ವರ್ಷ- ಜೀವಾವಧಿ ಶಿಕ್ಷೆ

# Slide 10: ವರದಕ್ಷಿಣೆ ಕಿರುಕುಳ

- ವರದಕ್ಷಿಣೆ ಎಂದರೆ, ಮದುವೆಗೆ ಸಂಬಂಧ ಪಟ್ಟಂತೆ ಹೆಣ್ಣಿನ ಕಡೆಯವರು ಗಂಡಿಗೆ ನೀಡುವ ಅಥವಾ ಒತ್ತಾಯಪೂರ್ವಕವಾಗಿ ಹೆಣ್ಣಿನ ಕಡೆಯವರಿಂದ ಪಡೆಯುವ ಅಥವಾ ಕರಾರು ಒಪ್ಪಂದ ಮಾಡಿಕೊಂಡ ಯಾವುದೇ ರೀತಿಯ ಹಣ ಅಥವಾ ವಸ್ತು ಅಥವಾ ಆಸ್ತಿ ರೂಪದ ಕೊಡುಗೆಗಳನ್ನು ಒಳಗೊಂಡಿರುತ್ತದೆ.
- ವರದಕ್ಷಿಣೆ ಪಡೆಯುವುದು ಮತ್ತು ಕೊಡುವುದು ವರದಕ್ಷಿಣೆ ನಿಷೇಧ ಕಾಯ್ದೆ– 1961 ರ ಪ್ರಕಾರ ಅಪರಾಧವಾಗಿದ್ದು, ಅದಕ್ಕೆ 5 ವರ್ಷ ಜೈಲುವಾಸ ಹಾಗೂ 15 ಸಾವಿರ ದಂಡ ವಿಧಿಸಲಾಗುತ್ತದೆ.
- ವರದಕ್ಷಿಣೆ ಸಂಬಂಧ ಮಹಿಳೆ ಸಾವು ಸಂಭವಿಸಿದರೆ 7 ವರ್ಷದಿಂದ ಜೀವಾವಧಿ ಶಿಕ್ಷೆ ನೀಡಲಾಗುತ್ತದೆ.




## Slide 11: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ

- ಲೈಂಗಿಕ ದೌರ್ಜನ್ಯ ಎಂದರೆ ಅತ್ಯಾಚಾರ, ಮಾನಭಂಗ, ಲೈಂಗಿಕ ಪ್ರಚೋದಿತ ಪದಗಳ ಬಳಕೆ, ಅಂಗಾಂಗಗಳನ್ನು ಮುಟ್ಟುವುದು, ಹಿಂಬಾಲಿಸುವುದು, ಚುಡಾಯಿಸುವುದು, ಮಹಿಳೆಯ ಖಾಸಗೀತನವನ್ನು ಕದ್ದು ನೋಡುವುದು ಮತ್ತು ಫೋಟೋ ವೀಡಿಯೋ ತೆಗೆಯುವುದು, ಲೈಂಗಿಕ ಪ್ರಚೋದಿತ ಎಸ್‌ಎಂಎಸ್, ಎಂಎಂಎಸ್, ಈಮೇಲ್, ಇತ್ಯಾದಿಗಳನ್ನು ಕಳಿಸುವುದಾಗಿದೆ.
- ಇಂತಹ ಅಪರಾಧಗಳನ್ನು ಮಾಡಿದರೆ ಐಪಿಸಿ ಕಲಂ 354, 376, 509 ರ ಪ್ರಕಾರ ಕಠಿಣ ಶಿಕ್ಷೆ ನೀಡಲಾಗುತ್ತದೆ.
- ಕೆಲಸದ ಸ್ಥಳಗಳಲ್ಲಿ ಸಹೋದ್ಯೋಗಿಗಳು ಲೈಂಗಿಕ ಕಿರುಕುಳ ನೀಡಿದರೆ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ.
- ಸರ್ಕಾರ/ಸರ್ಕಾರೇತರ ಸಂಸ್ಥೆಗಳು ಕೆಲಸ ಮಾಡುವ ಸ್ಥಳದಲ್ಲಿ Internal Complaint Committee ರಚನೆ ಮಾಡಬೇಕು.
- ಜಿಲ್ಲೆ, ತಾಲ್ಲೂಕು, ಪಂಚಾಯತ್ ಮಟ್ಟದಲ್ಲಿ Local Complaint Committee ಇದ್ದು, 10 ಕ್ಕಿಂತ ಕಡಿಮೆ ಕೆಲಸಗಾರರಿರುವ ಸಂಸ್ಥೆಗಳವರು ಇಲ್ಲಿ ದೂರು ನೀಡಬಹುದು. ಈ ಕಮಿಟಿಯಲ್ಲಿ ಒಬ್ಬ ಅಧ್ಯಕ್ಷ ಹಾಗೂ 4 ಜನ ಸದಸ್ಯರಿರುತ್ತಾರೆ.
- ದೂರು ವಿಚಾರಣೆ ನಂತರ ಸಾಬೀತಾದರೆ, ವಜಾ, ಪರಿಹಾರ ಹಾಗೂ ಕ್ರಿಮಿನಲ್ ಪ್ರಕರಣಕ್ಕೆ ಮಂಡಳಿ ಸೂಚಿಸಬಹುದು.
- ಈ ಬಗ್ಗೆ The Sexual Harassment of Women at workplace (Prevention, Prohibition and Redresses Act–2013 ಕಾಯ್ದೆಯಲ್ಲಿ ಹೇಳಿದೆ.

# PART 3

# Slide 1: ಸಹಾಯವಾಣಿ

- 1098– ದೂರವಾಣಿ ಸಂಖ್ಯೆ ಉಚಿತ ಮಕ್ಕಳ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ. 18 ವರ್ಷದೊಳಗಿನ ಯಾವುದೇ ರೀತಿಯ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆ ಬೇಕಾದಲ್ಲಿ ಈ ಸಹಾಯವಾಣಿಗೆ ಯಾರಾದರೂ ಕರೆ ಮಾಡಬಹುದು. ಇದು ಪ್ರತಿ ಜಿಲ್ಲೆಗೊಂದರಂತೆ ಇದ್ದು, ಕರೆ ಮಾಡಿದ ಕೂಡಲೇ ಮಗುವಿದ್ದ ಬಳಿಗೆ ಹೋಗಿ ಮಗುವನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸುತ್ತಾರೆ.
- 1091– ದೂರವಾಣಿ ಸಂಖ್ಯೆ ಉಚಿತ ಮಹಿಳೆಯರ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ. ಇದು ಪ್ರತಿ ತಾಲ್ಲೂಕಿಗೊಂದರಂತೆ ಇರುತ್ತದೆ. ಯಾವುದೇ ಮಹಿಳೆ ತನಗೆ ರಕ್ಷಣೆ ಮತ್ತು ನೆರವು ಬೇಕಾದಲ್ಲಿ ಈ ಸಹಾಯವಾಣಿಗೆ ಕರೆ ಮಾಡಬಹುದು. ಈ ಸಹಾಯವಾಣಿಯಲ್ಲಿ ಕೌಟುಂಬಿಕ ಹಿಂಸೆ ಪ್ರಕರಣಗಳು, ಆಪ್ತಸಲಹೆ, ತಾತ್ಕಾಲಿಕ ಪುನರ್ವಸತಿ, ಉಚಿತ ಕಾನೂನು ನೆರವು, ಆರ್ಥಿಕ ಪರಿಹಾರ, ವೈದ್ಯಕೀಯ ನೆರವನ್ನು ಒದಗಿಸಲಾಗುತ್ತದೆ.
- 1098– ದೂರವಾಣಿ ಸಂಖ್ಯೆ ಹಿರಿಯ ನಾಗರೀಕರ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕರ್ತವ್ಯ ನಿರ್ವಹಿಸುತ್ತದೆ. 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು ತಮ್ಮ ಕುಂದುಕೊರತೆ ಹಾಗೂ ತೊಂದರೆಗಳ ಬಗ್ಗೆ ದೂರು ನೀಡಿದಲ್ಲಿ ಸಹಾಯವಾಣಿಯಿಂದ ನೆರವನ್ನು ಪಡೆಯಬಹುದು.
- 100– ದೂರವಾಣಿ ಸಂಖ್ಯೆ ಉಚಿತ ಪೊಲೀಸ್ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರು ಪೊಲೀಸ್ ಸಹಾಯ ಬೇಕಾದಲ್ಲಿ ಈ ದೂರವಾಣಿಗೆ ಉಚಿತವಾಗಿ ಸಂಪರ್ಕಿಸಬಹುದು.
- 101– ದೂರವಾಣಿ ಸಂಖ್ಯೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರು ಅಗ್ನಿ ಅನಾಹುತ, ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಕರೆಮಾಡಿ ಸಹಾಯ ಪಡೆಯಬಹುದಾಗಿದೆ.
- 108– ದೂರವಾಣಿ ಸಂಖ್ಯೆ ಆರೋಗ್ಯ ಇಲಾಖೆಯ ಸಹಾಯವಾಣಿಯಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರು ಆರೋಗ್ಯ ಸಂಬಂಧ ಅಂಬುಲೆನ್ಸ್‌ಗಾಗಿ ಈ ದೂರವಾಣಿಗೆ ಕರೆ ಮಾಡಿ ಸಹಾಯ ಪಡೆಯಬಹುದು.


1098
1091
100
101
108
1090

- ಇದಲ್ಲದೆ ಕೆಲವೊಂದು ನಿರ್ದಿಷ್ಠ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳಾದ
- ಜಿಲ್ಲಾಡಳಿತ,
- ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಇಲಾಖೆ,
- ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ,
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
- ಮಹಿಳಾ ಸಾಂತ್ವನ ಕೇಂದ್ರ,
- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ.
- ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್.
- ರಾಜ್ಯ ಮಕ್ಕಳ ಹಕ್ಕುಗಳ ಆಯೋಗ.
- ಸಾರ್ವಜನಿಕ ಶಿಕ್ಷಣ ಇಲಾಖೆ,
- ಬಾಲ್ಯವಿವಾಹ ಸಹಾಯವಾಣಿ.
- ಕಾರ್ಮಿಕ ಇಲಾಖೆ,
- ಸಮಾಜ ಕಲ್ಯಾಣ ಇಲಾಖೆ,
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
- ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಗಳ ಸಂಪರ್ಕ ಪಡೆಯಬಹುದು.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ.
- ತಹಶೀಲ್ದಾರರ ಕಛೇರಿ.
- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ.
- ಕಾರ್ಮಿಕ ನಿರೀಕ್ಷಕರು.


ಬಾರ್
XX

## Slide 1: ಮಕ್ಕಳ ಶೋಷಣೆ

ನಿಮ್ಮ ಮನೆಯ ಪಕ್ಕದ ಮನೆಯಲ್ಲಿರುವ ಗೌರಿಯ
ತಂದೆ ದಿನಾಲೂ ಕುಡಿದುಕೊಂಡು ಬಂದು
ಗೌರಿಯ ತಾಯಿಗೆ ಹಾಗೂ ಆಕೆಯ ಅಣ್ಣ ತಂಗಿಗೆ
ಹೊಡೆಯುತ್ತಾನೆ. ಈಗ ನೀವು ಏನು ಮಾಡುತ್ತೀರಿ?




## Slide 2: ಹಿಂಬಾಲಿಸುವುದು

8ನೇ ತರಗತಿಯ ವಿದ್ಯಾರ್ಥಿನಿ ವಿನಯ, ಈಕೆಯು ಶಾಲೆಗೆ ಹೋಗಿ ಬರುವ ದಾರಿಯಲ್ಲಿ ಯುವಕರ ಗುಂಪೊಂದು ದಿನಾಲೂ ಆಕೆಯನ್ನು ಹಿಂಬಾಲಿಸಿಕೊಂಡು ಬಂದು ಚುಡಾಯಿಸುತ್ತಾರೆ. ವಿನಯ ನಿಮ್ಮ ಹತ್ತಿರ ಈ ವಿಷಯ ಹೇಳಿದಾಗ ನೀವೇನು ಮಾಡುವಿರಿ?



## Slide 3: ಬಾಲ್ಯವಿವಾಹ

ನಿಮ್ಮ ಶಾಲೆಯ 6ನೇ ತರಗತಿಯ ದೇವಮ್ಮಳಿಗೆ ಬೇಸಿಗೆ ರಜೆಯಲ್ಲಿ ವಿವಾಹ ನಿಶ್ಚಯ ಮಾಡಿದ್ದಾರೆ. ದೇವಮ್ಮಳಿಗೆ ಓದಬೇಕೆಂಬ ಆಸೆ ಇದ್ದು, ವಿವಾಹವಾಗಲು ಇಷ್ಟವಿಲ್ಲ. ಇದು ನಿಮಗೆ ಗೊತ್ತಾಗುತ್ತದೆ. ಏನು ಮಾಡುವಿರಿ?







# Slide 4: ಮಕ್ಕಳ ಕಾಣೆ

ನಿಮ್ಮ ಸ್ನೇಹಿತ ರಾಜು ಎರಡು ದಿನದಿಂದ ಬರುತ್ತಿಲ್ಲ. ಅವರ ಮನೆಯಲ್ಲಿ ವಿಚಾರಿಸಿದಾಗ ಆತನು ಆಟವಾಡಲು ಹೋದವನು ಇದುವರೆಗೂ ಮನೆಗೆ ಬಂದಿಲ್ಲ. ನಾವು ಗಾಬರಿಗೊಂಡು ಎಲ್ಲ ಕಡೆ ಹುಡುಕುತ್ತಿದ್ದೇವೆ ಎಂದು ಹೇಳುತ್ತಾರೆ ನೀವೇನು ಮಾಡುವಿರಿ?



## Slide 5: ಸಂವಾದಕ್ಕಾಗಿ ಪ್ರಶ್ನೆಗಳು

1. ಪೊಲೀಸ್ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಯಾರು?
2. ಪೊಲೀಸ್ ಠಾಣೆಯಲ್ಲಿ ಮಕ್ಕಳ ಸಲುವಾಗಿ ಇರುವ ಪ್ರತ್ಯೇಕ ಘಟಕ ಯಾವುದು?
3. ಪೊಲೀಸ್ ಠಾಣೆಯಲ್ಲಿ ದೂರು ನೀಡಿದಾಗ ಉಚಿತವಾಗಿ ನೀಡುವ ದಾಖಲೆ ಯಾವುದು?
4. ವಾಕಿಟಾಕಿ ಪೊಲೀಸರ ಹತ್ತಿರ ಯಾಕೆ ಇರುತ್ತದೆ?
5. ಸಂಚಾರಿ ಪೊಲೀಸರ ಕರ್ತವ್ಯಗಳೇನು?
6. ಮಕ್ಕಳ ಸಹಾಯವಾಣಿ ದೂರವಾಣಿ ಸಂಖ್ಯೆ ಯಾವುದು?
7. ಮದುವೆಯಾಗಲು ಹೆಣ್ಣು ಮತ್ತು ಗಂಡಿನ ವಯಸ್ಸು ಎಷ್ಟಿರಬೇಕು?
8. ಪೊಲೀಸರೊಂದಿಗಿನ ನಿಮ್ಮ ಒಡನಾಟ ನಾಚಿಕೆ ಅಥವಾ ಅವಮಾನವೇ?
9. ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಯಾರು?
10. ಪೊಲೀಸರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂ: ಡಿಜಿಪಿ/ತರಬೇತಿ/ಎಸ್‌ಜೆಪಿಯು/15/2013

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ,
ತರಬೇತಿ,
ಕಾರ್ಲ್‌ಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ: 31/05/2013.

**<u>ಸುತ್ತೋಲೆ</u>**

**ವಿಷಯ:_ತೆರೆದ ಮನೆ ಕಾರ್ಯಕ್ರಮ ಮತ್ತು ಜನಸಂಪರ್ಕ ಸಭೆಯಲ್ಲಿ ನೀಡಬೇಕಾದ ಮಾಹಿತಿ ಬಗ್ಗೆ.**

* * *

ಸಾರ್ವಜನಿಕರೊಂದಿಗೆ ಪೊಲೀಸರ ಸಂಬಂಧವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಈಶಾನ್ಯ ವಲಯ ಗುಲ್ಬರ್ಗಾದ ಠಾಣೆಗಳಲ್ಲಿ ನಡೆಸುತ್ತಿರುವ 'ತೆರೆದ ಮನೆ' (OPEN HOUSE) ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಿದೆ. ಠಾಣಾ ವ್ಯಾಪ್ತಿಯಲ್ಲಿ ಬರುವ ಶಾಲಾ ಮಕ್ಕಳನ್ನು ಪ್ರತಿ ಗುರುವಾರ ಬೆಳಗ್ಗೆ 10-30 ಗಂಟೆಯಿಂದ ಸಂಜೆ 4-30 ಗಂಟೆಯ ಅವಧಿಯೊಳಗೆ ಠಾಣೆಗೆ ಕರೆತಂದು ಮಕ್ಕಳಿಗೆ ಪೊಲೀಸ್ ಇಲಾಖೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುವುದು ಹಾಗೂ ತಮ್ಮ ಠಾಣಾ ವ್ಯಾಪ್ತಿಯ ಶಾಲೆಗಳಿಗೆ ಠಾಣಾಧಿಕಾರಿಯು ಭೇಟಿ ನೀಡಿ ಸಂವಾದ ನಡೆಸುವುದು. ಈ ಬಗ್ಗೆ ಪ್ರತಿ ಗುರುವಾರ ಸಾಯಂಕಾಲ ಆಯಾ ಜಿಲ್ಲಾ/ನಗರ ನಿಸ್ತಂತು ಘಟಕವು ಮಾಹಿತಿ ಪಡೆದು ಈ ಕಛೇರಿಗೆ ರವಾನಿಸುವುದು.

ಹಾಗೂ ಈ ಹಿಂದೆ ಹೊರಡಿಸಿರುವ ಸ್ಥಾಯಿ ಆದೇಶ ಸಂಖ್ಯೆ:920 ದಿನಾಂಕ:4/04/1994ರಂತೆ ಪ್ರತಿ ತಿಂಗಳಿಗೊಂದರಂತೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕಡ್ಡಾಯವಾಗಿ **'ಜನಸಂಪರ್ಕ ಸಭೆ'** (Community Outreach Programme) ಗಳನ್ನು ನಡೆಸುವಂತೆ ಸೂಚಿಸಲಾಗಿದೆ. ಸದರಿ ಸಭೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳು ಹಾಗೂ ಕಾಯ್ದೆಗಳ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಿಸುವುದು.

ಸದರಿ ಠಾಣಾ ಮಟ್ಟದಲ್ಲಿ ನಡೆಸುವ ತೆರೆದ ಮನೆ ಹಾಗೂ ಜನಸಂಪರ್ಕ ಸಭೆಯಲ್ಲಿ ಈ ಕೆಳಗಿನ ಮಾಹಿತಿಯನ್ನು ನೀಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

1. **ಪೊಲೀಸ್ ಇಲಾಖೆ ಎಂದರೇನು? ಪೊಲೀಸ್ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ವಿವರ:-**
   ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಣೆ, ಅಪರಾಧಗಳನ್ನು ತಡೆಯುವುದು ಮತ್ತು ಪತ್ತೆ ಹಚ್ಚುವುದು, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಖಾಕಿ ಸಮವಸ್ತ್ರಧಾರಿ ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ.

1

2. **ಮೂಲತ: ಜನಸಂಪರ್ಕ ಸಭೆ ನಡೆಯುವ ಪಂಚಾಯ್ತಿ/ಹಳ್ಳಿ/ವಾರ್ಡ್‌ನಲ್ಲಿನ(ದಾಖಲಾದ ಪ್ರಕರಣಗಳನ್ನಾಧರಿಸಿ) ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು:-**
   ಜನಸಂಪರ್ಕ ಸಂವಾದ ಸಭೆ ನಡೆಯುವ ಸ್ಥಳದಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಹಾಗೂ ಅವುಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಆ ಸ್ಥಳದಲ್ಲಿನ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವುದು.
3. **ಮಕ್ಕಳ ಹಕ್ಕುಗಳಿಗೆ ಸಂಬಂಧಪಟ್ಟ ಕಾನೂನುಗಳ ಬಗ್ಗೆ ವಿವರಿಸುವುದು.**
   ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಗುರುತಿಸಲಾದ 1. ಜೀವಿಸುವ ಹಕ್ಕು, 2. ರಕ್ಷಣೆಯ ಹಕ್ಕು, 3.ಅಭಿವೃದ್ಧಿ ಹೊಂದುವ ಹಕ್ಕು, 4. ಭಾಗವಹಿಸುವ ಹಕ್ಕು, ಇವುಗಳನ್ನು ರಕ್ಷಣೆ ಮಾಡುವ ಜವಾಬ್ಧಾರಿ ಸರ್ಕಾರ, ಕುಟುಂಬ ಮತ್ತು ಸಾರ್ವಜನಿಕರ ಕರ್ತವ್ಯವಾಗಿರುತ್ತದೆ.

   ➢ ಬಾಲ ನ್ಯಾಯ ಕಾಯ್ದೆ-2000 ಅಡಿಯಲ್ಲಿ ಮಕ್ಕಳು ಎಂದರೆ 18 ವರ್ಷದೊಳಗಿನವರು ಎಂದು ಹೇಳಿದೆ.

   ➢ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006ರ ಅನ್ವಯ 21 ವರ್ಷದೊಳಗಿನ ಗಂಡು, 18 ವರ್ಷದೊಳಗಿನ ಹೆಣ್ಣು ಮದುವೆಯಾದರೆ ಅದನ್ನು ಬಾಲ್ಯವಿವಾಹ ಎಂದು ಕರೆಯುತ್ತೇವೆ.
   ಆ ರೀತಿ ಮದುವೆಯಾದರೆ ಮದುವೆಯಾದ ವಯಸ್ಕ ಪುರಷ, ವಧು, ವರರ ತಂದೆ ತಾಯಿಗಳು, ಅವರ ಸಂಬಂಧಿಕರು, ಪುರೋಹಿತ ಹಾಗೂ ಆ ಮದುವೆಯಲ್ಲಿ ಹಾಜರಿದ್ದವರೆಲ್ಲರೂ ಅಪರಾಧಿಗಳಾಗುತ್ತಾರೆ. ಇವರಿಗೆ 2 ವರ್ಷ ಜೈಲು ಹಾಗೂ 1 ಲಕ್ಷ ದಂಡ ವಿಧಿಸಬಹುದಾಗಿದೆ.

   ➢ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986ರ ಅನ್ವಯ 14 ವರ್ಷದೊಳಗಿನ ಶಾಲೆಬಿಟ್ಟ ಎಲ್ಲ ಮಕ್ಕಳನ್ನು ಬಾಲ ಕಾರ್ಮಿಕರೆಂದು ಪರಿಗಣಿಸಲಾಗಿದೆ.

   ಬಾಲ ಕಾರ್ಮಿಕರನ್ನು ಕೆಲಸಕ್ಕಿಟ್ಟುಕೊಂಡರೆ 1 ವರ್ಷ ಶಿಕ್ಷೆ ಮತ್ತು 20 ಸಾವಿರ ದಂಡ ವಿಧಿಸಬಹುದಾಗಿದೆ.
   15-18 ವರ್ಷದೊಳಗಿನ ಮಕ್ಕಳನ್ನು ದುಡಿಸಿಕೊಂಡು ದೌರ್ಜನ್ಯ ಮತ್ತು ಹಿಂಸೆ ನೀಡಿದರೆ ಬಾಲ ನ್ಯಾಯ ಕಾಯ್ದೆ ಪ್ರಕಾರ 3 ವರ್ಷ ಶಿಕ್ಷೆ ಮತ್ತು ದಂಡ ಹಾಗೂ ಐಪಿಸಿ ಮತ್ತು ಇತರೇ ಕಾಯ್ದೆಗಳ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಬಹುದು.

   ➢ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ-2009ರ ಪ್ರಕಾರ ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಹೊಂದುವ ಹಕ್ಕು ಹೊಂದಿರುವರು.

   ➢ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಮಕ್ಕಳು ಎಂದರೆ 18 ವರ್ಷದೊಳಗಿನವರು. ಆದ್ದರಿಂದ 18 ವರ್ಷದೊಳಗಿನ ಎಲ್ಲ ಮಕ್ಕಳು ಶಾಲೆಯಲ್ಲಿರಬೇಕು.

   ➢ ಬಾಲ ನ್ಯಾಯ ಕಾಯ್ದೆ ಪ್ರಕಾರ ತೊಂದರೆಯಲ್ಲಿರುವ(ಆರೈಕೆ ಮತ್ತು ರಕ್ಷಣೆ) ಮಕ್ಕಳನ್ನು ಪ್ರತಿ ಜಿಲ್ಲೆ/ನಗರಗಳಲ್ಲಿ ಇರುವ ಮಕ್ಕಳ ಕಲ್ಯಾಣ ಸಮಿತಿಗೆ ಯಾರಾದರೂ ಹಾಜರ್ಪಡಿಸಬಹುದು.
   ಕಾನೂನು ಸಂಘರ್ಷಕ್ಕೆ ಒಳಗಾದ (ತಪ್ಪು ಮಾಡಿದ) ಮಕ್ಕಳನ್ನು ಬಾಲ ನ್ಯಾಯ ಮಂಡಳಿಗೆ ಪೊಲೀಸ್ ಮೂಲಕ ಹಾಜರ್ಪಡಿಸಲಾಗುತ್ತದೆ.

   ➢ ಮಕ್ಕಳನ್ನು ಬಿಕ್ಷಾಟನೆಗಾಗಿ, ದುಡಿಸಿಕೊಳ್ಳಲು, ವೇಶ್ಯಾವಾಟಿಕೆಗೆ ಹಾಗೂ ಇತರೇ ಉದ್ದೇಶಗಳಿಗಾಗಿ ಮಾರಾಟ ಮತ್ತು ಸಾಗಾಣಿಕೆ ಮಾಡಿದರೆ ಐಟಿಪಿಎ ಕಾಯ್ದೆ/ಐಪಿಸಿ ಅನ್ವಯ ಅಪರಾಧವಾಗಿದೆ.

   ➢ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ - 2012ರ ಬಗ್ಗೆ ತಿಳಿಸುವುದು.

2

**4. ಮಕ್ಕಳು ಮತ್ತು ಮಹಿಳೆಯರು ಮನೆ ಬಿಟ್ಟು ಹೋದರೆ ಮುಂದೆ ಎದುರಿಸುವ ಸಮಸ್ಯೆಗಳು.**

ಯಾವುದೇ ಮಕ್ಕಳು ಅಥವಾ ಮಹಿಳೆಯರು ಯಾವುದೇ ಕಾರಣಗಳಿಗಾಗಿ ಮನೆ ಬಿಟ್ಟು ಹೋದರೆ ನೀವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿ ಈ ರೀತಿ ಹಳ್ಳಿಗಳಿಂದ ಮನೆ ಬಿಟ್ಟು ಬರುವವರನ್ನು ಕರೆದುಕೊಂಡು ಹೋಗಿ ಕೆಲಸ ಕೊಡಿಸುವ ನೆಪ ಹೇಳಿ ನಿಮ್ಮನ್ನು ವೇಶ್ಯಾವಾಟಿಕೆಗೆ, ಭಿಕ್ಷಾಟನೆಗೆ, ಅಂಗಾಂಗ ಮಾರಾಟಕ್ಕೆ, ಜೀತಕ್ಕೆ ನೇಮಿಸಿಕೊಳ್ಳಬಹುದು. ಆದ್ದರಿಂದ ನೀವು ನಿಮ್ಮ ಮನೆ ಮತ್ತು ಊರನ್ನು ಬಿಟ್ಟು ಹೋಗುವ ಮುಂಚೆ ಯೋಚಿಸಬೇಕು. ನಿಮ್ಮ ರಕ್ಷಣೆಗಾಗಿ ನಮ್ಮನ್ನು ಸಂಪರ್ಕಿಸಿ ಸಹಾಯ ಪಡೆದುಕೊಳ್ಳಿ.

**5. ಮಹಿಳೆಯರ ಹಕ್ಕುಗಳು ಹಾಗೂ ಸಂಬಂಧಪಟ್ಟ ಕಾನೂನುಗಳ ಬಗ್ಗೆ ವಿವರಿಸುವುದು.**

- ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದೌರ್ಜನ್ಯ ಎಸಗುವವರ ಮೇಲೆ 498(ಎ) ಐಪಿಸಿ ಹಾಗೂ ಇತರೇ ಕಾಯ್ದೆಗಳ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಬಹುದು.
- ಮಹಿಳೆಯು ಪರಿಹಾರಕ್ಕಾಗಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ – 2005 ರಡಿಯಲ್ಲಿ ಸಿಡಿಪಿಓರವರ ಬಳಿ ದೂರನ್ನು ಸಲ್ಲಿಸಬಹುದಾಗಿದೆ.

**6. ಜಿಲ್ಲೆ/ನಗರಗಳಲ್ಲಿ ಮಕ್ಕಳು ಮತ್ತು ಮಹಿಳೆಯರಿಗೆ ಇರುವ ರಕ್ಷಣೆ ವ್ಯವಸ್ಥೆಗಳ ವಿವರ.**

- ಪೊಲೀಸ್ ಕಂಟ್ರೋಲ್ ರೂಂ–100.
  ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಹಾಗೂ ಅಪರಾಧಗಳು ಜರುಗುವ ಬಗ್ಗೆ ಮಾಹಿತಿಗೆ ಸಂಬಂಧಿಸಿದಂತೆ ಪೊಲೀಸ್ ಕಂಟ್ರೋಲ್ ರೂಂ 100ಗೆ ಕರೆ ಮಾಡಬಹುದಾಗಿದೆ.
- ಮಕ್ಕಳ ಸಹಾಯವಾಣಿ–1098.
  18 ವರ್ಷದೊಳಗಿನ ಮಕ್ಕಳ ಯಾವುದೇ ಸಮಸ್ಯೆಗಾಗಿ ಜಿಲ್ಲೆಯಲ್ಲಿ ಉಚಿತ ದೂರವಾಣಿ ಸಂಖ್ಯೆ 1098 ಕಾರ್ಯನಿರ್ವಹಿಸುತ್ತಿದ್ದು ಅಲ್ಲಿಗೆ ಕರೆ ಮಾಡಿ ದೂರು ಸಲ್ಲಿಸಬಹುದು.
- ಮಹಿಳಾ ಸಹಾಯವಾಣಿ–1091.
  ಮಹಿಳೆಯರ ಸಮಸ್ಯೆಗೆ ಸಂಬಂಧಿಸಿದಂತೆ ಉಚಿತ ದೂರವಾಣಿ ಸಂಖ್ಯೆ 1091 ಕಾರ್ಯ ನಿರ್ವಹಿಸುತ್ತಿದ್ದು ಅಲ್ಲಿಗೆ ಕರೆ ಮಾಡಿ ದೂರು ಸಲ್ಲಿಸಬಹುದು. ಹಾಗೂ ಪ್ರತಿ ತಾಲ್ಲೂಕಿನಲ್ಲಿ ಇರುವ ಸಾಂತ್ವಾನ ಕೇಂದ್ರಗಳಿಗೆ ದೂರು ನೀಡಬಹುದಾಗಿದೆ.
- ಪೊಲೀಸ್ ಠಾಣೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಹೆಲ್ಪ್‌ಡೆಸ್ಕ ಬಗ್ಗೆ ಮಾಹಿತಿ ನೀಡುವುದು
  ಪ್ರತಿ ಪೊಲೀಸ್ ಠಾಣೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಕುಂದುಕೊರತೆ ಆಲಿಸಲು ಪ್ರತ್ಯೇಕ ವಿಭಾಗ ಇರುತ್ತದೆ. ಯಾವುದೇ ಸಾರ್ವಜನಿಕರು, ಮಹಿಳೆಯರು, ಮಕ್ಕಳು ಯಾವುದೇ ಭಯವಿಲ್ಲದೆ ದಿನದ 24 ಗಂಟೆಯೂ ಸಹ ಪೊಲೀಸ್ ಠಾಣೆಗೆ ಬಂದು ನಿಮ್ಮ ದೂರನ್ನು ನೀಡಬಹುದಾಗಿದೆ.
- **ಮಕ್ಕಳ ಕಲ್ಯಾಣ ಸಮಿತಿ,**
  ಪ್ರತಿ ಜಿಲ್ಲೆಯಲ್ಲಿ ಒಂದು ಮಕ್ಕಳ ಕಲ್ಯಾಣ ಸಮಿತಿ ಇದ್ದು, ಇದರಲ್ಲಿ ಒಬ್ಬರು ಅದ್ಯಕ್ಷರು ಮತ್ತು 4 ಜನ ಸದಸ್ಯರು ಇರುತ್ತಾರೆ. 18 ವರ್ಷದೊಳಗಿನ ಮಕ್ಕಳ ರಕ್ಷಣೆ ಪೋಷಣೆ ಸಲುವಾಗಿ ಈ ಸಮಿತಿಯ ಮುಂದೆ ಯಾವುದೇ ಒಬ್ಬ ಸಾರ್ವಜನಿಕ ಮಕ್ಕಳನ್ನು ಹಾಜರ್ಪಡಿಸಬಹುದು.
- **ಮಕ್ಕಳ ವಿಶೇಷ ಪೊಲೀಸ್ ಘಟಕ**



ಜಿಲ್ಲೆ/ನಗರ ಪೊಲೀಸ್ ಕಛೇರಿಯಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕ ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲೆ/ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ವರದಿಯಾದ ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಆರೈಕೆ ಮತ್ತು ರಕ್ಷಣೆ ಬೇಕಾದ ಮಕ್ಕಳ ಮಾಹಿತಿ ಈ ಘಟಕದಲ್ಲಿ ಇದ್ದು, ಎಲ್ಲಾ ಪೊಲೀಸ್ ಠಾಣೆಗಳೊಂದಿಗೆ ಸಂಪರ್ಕದಲ್ಲಿರುತ್ತದೆ. ಪ್ರತಿ ಪೊಲೀಸ್ ಠಾಣೆಯಲ್ಲಿ ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ಪಡೆದ ಮಕ್ಕಳ ಕಲ್ಯಾಣಾಧಿಕಾರಿಗಳು ಇರುತ್ತಾರೆ, ಮಕ್ಕಳಿಗೆ ಸಂಬಂಧಪಟ್ಟ ಯಾವುದೇ ಪ್ರಕರಣಗಳನ್ನು ಅವರಿಗೆ ತಿಳಿಸಬಹುದಾಗಿದೆ.

**7. ನಿಮಗೆ ಅನುಮಾನಾಸ್ಪದ ವ್ಯಕ್ತಿಗಳು, ಕಳ್ಳಕಾಕರು, ದರೋಡೆಕೋರರು, ವಂಚಕರು ಊರಿಗೆ ಹೊಸದಾಗಿ ಬಂದ ವ್ಯಕ್ತಿಗಳು ಕಂಡು ಬಂದರೆ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸುವ ಬಗ್ಗೆ:–**

ನಿಮ್ಮ ಹಳ್ಳಿಗಳಲ್ಲಿ ಅಥವಾ ನೀವು ವಾಸಿಸುವ ಸ್ಥಳಗಳಲ್ಲಿ ನಿಮ್ಮ ಊರಿನವರಲ್ಲದೆ ಬೇರೆಯವರು ಬಂದು ಅನುಮಾನಾಸ್ಪದವಾಗಿ ತಿರುಗುತ್ತಿದ್ದರೆ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಹಣ ದ್ವಿಗುಣಗೊಳಿಸುವ, ಬೆಳ್ಳಿ ಬಂಗಾರ ಪಾಲಿಷ್ ಮಾಡುವವರು, ಕೆಲಸ ಕೊಡಿಸುತ್ತೇನೆ ಎಂದು ಆಮಿಷ ತೋರಿಸುವವರು, ಸಿನಿಮಾದಲ್ಲಿ ಚಾನ್ಸ್ ಕೊಡಿಸುತ್ತೇನೆಂದು ಹೇಳುವ ವ್ಯಕ್ತಿಗಳು ಕಂಡು ಬಂದರೆ ನೀವು ಹತ್ತಿರದ ಪೊಲೀಸ್ ಠಾಣೆ ಅಥವಾ ಪೊಲೀಸ್ ಕಂಟ್ರೋಲ್ ರೂಂ 100ಗೆ ಕರೆ ಮಾಡಿ ತಿಳಿಸಬಹುದಾಗಿದೆ. ನಿಮ್ಮ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ.

ಮೇಲ್ಕಂಡ ಮಾಹಿತಿಯ ಜೊತೆಗೆ ಸ್ಥಳೀಯ ಸಮಸ್ಯೆಯ ವಿಷಯಗಳ ಕಡೆಗೆ ಗಮನಹರಿಸಿ ತಿಳಿಸಲು ಸೂಚಿಸಲಾಗಿದೆ.

(ಎಸ್. ಮಹಾಪಾತ್ರ, ಐ.ಪಿ.ಎಸ್.,)
ಪೊಲೀಸ್ ಮಹಾ ನಿರ್ದೇಶಕರು,(ತರಬೇತಿ)
ಮತ್ತು ನೊಡಲ್ ಅಧಿಕಾರಿಗಳು,
ಮಕ್ಕಳ ವಿಶೇಷ ಪೊಲೀಸ್ ಘಟಕ, ಕರ್ನಾಟಕ ರಾಜ್ಯ.

**ರವರಿಗೆ:**

1. ಪೊಲೀಸ್ ಆಯುಕ್ತರು ಬೆಂಗಳೂರು, ಮೈಸೂರು, ಮಂಗಳೂರು, ಹಾಗೂ ಹುಬ್ಬಳ್ಳಿ–ಧಾರವಾಡ ನಗರಗಳು.
2. ಎಲ್ಲಾ ವಲಯದ ಪೊಲೀಸ್ ಮಹಾ ನಿರೀಕ್ಷಕರುಗಳಿಗೆ.
3. ಎಲ್ಲಾ ಉಪ ಪೊಲೀಸ್ ಆಯುಕ್ತರುಗಳಿಗೆ, ಬೆಂಗಳೂರು ನಗರ ಒಳಗೊಂಡಂತೆ.
4. ಎಲ್ಲಾ ಜಿಲ್ಲೆಯ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್ ಸೇರಿದಂತೆ.

**ಪ್ರತಿಯನ್ನು ಮಾಹಿತಿಗಾಗಿ:**

1. . ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಅಪರಾಧ & ತಾಂತ್ರಿಕ ಸೇವೆಗಳು) ಬೆಂಗಳೂರು.
2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಆಡಳಿತ) ನೃಪತುಂಗ ರಸ್ತೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:**

1. ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
2. ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು.
3. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ:**

1. ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು.
2. ಆಯುಕ್ತರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.

For any information and support contact:

**DGP of Police (Training) & Nodal Officer,**
The Gender Sesitisation Police Project, Karnataka State
CID, Carlton House, #1 Palace Road, Bangalore- 560001
Phone: +91 80 22094419, 22264311, Fax: 91 80 22942231
Email: dgptraining@ksp.gov.in

Content creation and facilitation by:

**United Nations Children's Fund**
317/A, MLA Colony, Road No. 12, Banjara Hills, Hyderabad - 500 034 INDIA
Tel: 91 40 23540712, 23540722, 23540744, 23540239, Fax: 91 40 23555156
www.unicef.org

Illustration and Design: M B Suresh Kumar